START

MICROFILMED
BY
NATIONAL ARCHIVES
OF INDIA
NEW DELHI 1975

REEL NO

2

KARNATAKA STATE ARCHIVES

SRINIVASA RAO MANGALAVEDE COLLECTION

Old Newspapers

KANNADA NAVAJIVANA
Published from Bagalakote

KANNADIGA
Published from Bagalakote

KANNADIGA
Published from Dharawada

ಕರ್ನಾಟಕ ರಾಜ್ಯಪತ್ರಾಗಾರ

ಶ್ರೀನಿವಾಸರಾವ್ ಮಂಗಳವೇಢೆಕಲಿಕ್ಷನ್

ರಳೆಯ ಕಾಲದ ವೃತ್ತಪತ್ರಿಕೆಗಳ

ಕನ್ನಡ ನವಜೀವನ

ಬಾಗಲಕೋಟೆಯಿಂದ ಪ್ರಕಟಿತ

ಕನ್ನಡಿಗ

ಬಾಗಲಕೋಟೆಯಿಂದ ಪ್ರಕಟಿತ

ಕನ್ನಡಿಗ

ಧಾರವಾಡದಿಂದ ಪ್ರಕಟಿತ

N O T E

The Karnataka State Archives is obliged to Sri Srinivasa Rao Mangalavede for granting it permission to take microfilm copies of old-time newspapers with him. The newspapers included in the present collection played an important part in India's freedom struggle. Sri Srinivasa Rao Mangalavede was himself, for the most part, the editor of Kannada Navajivana and Kannadiga published from Bagalakote, and he holds a high place among the freedom fighters of Karnataka. Kannadiga of Dharwar was edited by Sri Alur Venkata Rao, another great name among Karnataka's freedom fighters, and a mentor of Sri Mangalavede.

ವಿಜ್ಞಾಪನೆ

ಕರ್ನಾಟಕ ರಾಜ್ಯಪತ್ರಾಗಾರವು ಶ್ರೀಮಾನ್ ಶ್ರೀ ವಿಶ್ವನಾಥರಾವ್ ಮಂಗಳ ವೇಡ್ಕೆಯವರಿಗೆ ತಮ್ಮಲ್ಲಿರುವ ಹಳೆಯ ಕಾಲದ ವೃತ್ತಪತ್ರಿಕೆಗಳ ಫೋಟೋ ಪ್ರತಿಗಳನ್ನು ತೆಗೆದುಕೊಳ್ಳಲು ಅನುಮತಿ ಕೊಟ್ಟಿದ್ದಕ್ಕೆ ಚಿರಋಣಿಯಾಗಿದೆ. ಇಲ್ಲಿ ಸಂಗ್ರಹಿಸಿರುವ ಪತ್ರಿಕೆಗಳಿಗೆ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಅಗ್ರಸ್ಥಾನವಿದೆ. ಶ್ರೀಮಾನ್ ಮಂಗಳ ವೇಡ್ಕೆಯವರು ಸ್ವತಃ ಹೊಗಲಕೋಟೆಯಿಂದ ಪ್ರಕಟಿಕವಾದ ಕನ್ನಡನಾಡ ಜೀವನ ಮತ್ತು ಕನ್ನಡಿಗ ಪತ್ರಿಕೆಗಳ ಸಂಪಾದಕರಾಗಿದ್ದರು. ಅಲ್ಲದೆ ಅವರು ಸ್ವಾತಂತ್ರ್ಯಸಂಗ್ರಾಮ ವೀರರಲ್ಲಿ ಅಗ್ರಗಣ್ಯರು. ಧಾರವಾಡದಿಂದ ಪ್ರಕಟಿಕವಾದ ಕನ್ನಡಿಗ ದಿನಪತ್ರಿಕೆಯನ್ನು ಸಂಪಾದಕರು ಶ್ರೀ ಊರು ವೆಂಕಟರಾಯರು. ಇವರು ಇಷ್ಟೇ ಯಶಸ್ವಿಗಳು. ಮಂಗಳ ವೇಡ್ಕೆಯವರಿಗೆ ಸ್ವಾತಂತ್ರ್ಯಪಥದ ಮಾರ್ಗದರ್ಶಿಗಳು.

C O N T E N T S

KANNADA NAVAJIVANA Weekly. Published from Bagalakote	24 Nov. 1921 to 23 Nov. 1922
KANNADIGA Daily. Published from Bagalakote	22 March 1930 to 26 July 1930 9 December 1930 to 17 March 1931 20 March to 16 April 1931
KANNADIGA Biweekly. Published from Bagalakote	2 April to 27 July 1930
KANNADIGA Weekly. Published from Bagalakote	25 March 1925 to 18 March 1928 23 Nov. 1930 to 1 March 1931
KANNADIGA Daily. Published from Dharwad	24 August to 24 Nov. 1933

ವಿಷಯಾನುಕ್ರಮಣಿಕೆ.

ಕನ್ನಡನಾಡ ಜೀವನ ವಾರಪತ್ರಿಕೆ. ಬಾಗಲಕೋಟೆಯಿಂದ ಪ್ರಕಟಿತ.	೨೫-೧೧-೧೯೨೧ ರಿಂದ ೨೨-೧೧-೧೯೨೨
ಕನ್ನಡ ದಿನಪತ್ರಿಕೆ. ಬಾಗಲಕೋಟೆಯಿಂದ ಪ್ರಕಟಿತ.	೨೨-೨-೧೯೨೦ ರಿಂದ ೨೬-೨-೧೯೨೦ ೯-೧೨-೧೯೨೦ ರಿಂದ ೧೭-೨-೧೯೨೧ ೨೦-೨-೧೯೨೧ ರಿಂದ ೧೬-೪-೧೯೨೧
ಕನ್ನಡಿಗ ವಾರಕ್ಕೆ ಎರಡುಸಲ. ಬಾಗಲಕೋಟೆಯಿಂದ ಪ್ರಕಟಿತ	೨-೪-೧೯೨೦ ರಿಂದ ೨೭-೨-೧೯೨೦
ಕನ್ನಡಿಗ ವಾರಪತ್ರಿಕೆ. ಬಾಗಲಕೋಟೆಯಿಂದ ಪ್ರಕಟಿತ	೨೫-೨-೧೯೨೫ ರಿಂದ ೧೮-೨-೧೯೨೮ ೨೭-೧೧-೧೯೨೦ ರಿಂದ ೧-೨-೧೯೨೧
ಕನ್ನಡಿಗ ದಿನಪತ್ರಿಕೆ. ಧಾರವಾಡದಿಂದ ಪ್ರಕಟಿತ.	೨೪-೮-೧೯೨೨ ರಿಂದ ೨೪-೧೦-೧೯೨೨

KANNADIGA

BI-WEEKLY

YEAR. 6. Nos. 1-32

FROM 2-4-1930

TO 27-7-1930.

ಕನ್ನಡಿಗ

ವಾರಕ್ಕೆ 2ಸಲ ಪ್ರಕಟಣೆ

ವರ್ಷ 6. ಸಂಖ್ಯೆ 1 ರಿಂದ 32 ಗೆ

2-4-1930 ರಿಂದ

27-7-1930 ಗೆ.

ಮುಂದಿನ ಜೀವನದಬಗ್ಗೆ ವಿಚಾರಿಸಿರಿ.

ಪ್ರತಿ ಒಬ್ಬ ಪ್ರಾಪಂಚಿಕ ಮನುಷ್ಯನು ಮುಂದಿನ ಜೀವನದ ಸಲುವಾಗಿ ಹಣವನ್ನು ಸಂಗ್ರಹಿಸಿ ಇಡ ಲೇಬೇಕಾಗುವದು. ಧನಸಂಪಾದನೆಯ ಶಕ್ತಿಯು ನಷ್ಟ ಹೊಂದುವ ಕಾಲವು ಒದಗಿದಾಗ, ಈ ಜೀವ ವಿಮೆಯೇ ಅಮೌಲ್ಯವಾದ ಜೀವನದ ಸಾಧನವಾಗಿರುತ್ತದೆ. ಆದದರಿಂದ

೧೯೯೬ ನೇ ಇಸ್ವಿಯಲ್ಲಿ ಸಾಪಿತನಾದ.

ಎಂಪಾಯರ ಅಫ ಇಂಡಿಯಾ ಲಾಯಿಫ ಅಶ್ಯೂರೆನ್ಸ ಕಂಪನಿಯಲ್ಲಿ

ಜೀವ ವಿಮೆಯನ್ನು ಇಳಿಸಿರಿ.

ಚಾಲತಿಯಲ್ಲಿದ್ದ ವಿಮೆಯ ಹಣವು ಒಟ್ಟು ೧೦ ಕೋಟಿ ೮ ಲಕ್ಷಕ್ಕೆ ಮಿಕ್ಕಿದೆ.
ಕಂಪನಿಯ ಒಟ್ಟು ಆಸ್ತಿಯು ೩ ಕೋಟಿ ೫೬ ಲಕ್ಷಕ್ಕಿಂತ ಹೆಚ್ಚಾಗಿದೆ.
ಹಕ್ಕುದಾರರಿಗೆ ಕೊಟ ರಕಮು ೨ ಕೋಟಿ ೮೪ ಲಕ್ಷಕ್ಕೆ ಮಿಕ್ಕಿದೆ.
ವಾರ್ಷಿಕ ಉತ್ಪನ್ನವು ೬ ಕೋಟಿ ೪೪ ಲಕ್ಷಕ್ಕೆ ಮೀರಿದೆ.
ಏಜಂಟರು ಜೀಕಾಗಿದ್ದಾರೆ. ಅವರಿಗೆ ಬೇಕಾಗುವ ಸವಲತ್ತುಗಳು ಕೊಡಲ್ಪಡುವವು.

ಹೆಚ್ಚಿನ ಸಂಗತಿಗಳಿಗಾಗಿ ಕೆಳಗೆ ಕಾಣಿಸಿದವರಲ್ಲಿ ಬೇಕಾದವರ ಸಂಗಡ ಪತ್ರವ್ಯವಹಾರ ಮಾಡಬೇಕು:—

ಶಿಕ್ಕುನ್ನ ಬ್ರಾಂಚ ಆಫೀಸ ಈಸ್ಟಸ್ಟ್ರೀಟ, ಪುಣೆ | ಹೆಡ್ ಆಫೀಸ ಮುಂಬೈ. | ಮೈಸೂರ ಬ್ರಾಂಚ ಆಫೀಸ ಕಮರ್ಸಿಯಲ್ ಸ್ಟ್ರೀಟ ಬೆಂಗಳೂರ.

ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯಕಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು, ದೊರೆಯದೇ ನಿರುತ್ಸಾಹ ನಿರಾಶೆಗಳು ಕಾಟ್ಟುತ್ತಿವೆ. ಇಂಥ ಮನುಷ್ಯರ ಧಾತು ಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ತಂದು ಕೊಡುವಂತಹದ್ದು. ವೈದ್ಯರಾಜ ಶ್ರೀ ಶಂಕರಶಾಸ್ತ್ರೀ ಮಿರಜಕರ ಇವರ,

ಶಕ್ತಿ ಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸರ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲಶರೀರ, ನಿರುತ್ಸಾಹ ಮನಸ್ಸು ಪೌರುಷತ್ವಹೀನ ದೇಹ ಅನಿಶ್ಚಿತಸ್ವಭಾವ, ನಿಸ್ತೇಜತನವನ್ನೂ, ಹೇಡಿತನವನ್ನೂ, ಅಂಜುಬುರುಕತನ, ಅಕಾಲಮುಪ್ಪು, ಸ್ವಪ್ನಾವಸ್ಥೆ, ವೀರ್ಯ ದೌರ್ಬಲ್ಯ, ಆಲಸ್ಯ, ಕಣ್ಣು ಕೈಕಾಲುಗಳಿರೋಣ, ಉರಿಮೂತ್ರ, ಇಂದ್ರಿಯದೌರ್ಬಲ್ಯ, ಪಿತ್ತವಿಕಾರ, ಅಗ್ನಿಮಾಂದ್ಯ ನಿದ್ರಾನಾಶ, ಮಲಾವರೋಧ, ಬೆನ್ನು ನೋಯಿಸೋಣ, ಜೊಂಕಸೂಲಿ, ಎಲ್ಲಿತ್ತಾದ ಮೂತ್ರರೋಗ ಮೊದಲಾದ ಎಲ್ಲ ಬೇನೆಗಳು ವಾಸಿಯಾಗಿ, ರಸ, ರಕ್ತ ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಏಳು ವೀರ್ಯಗಳ ವೃದ್ಧಿಯಾಗಿ ಇಂದಿಯ ಜನ್ಯ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟುಸೂಲಿ, ಕೆಂಪು, ಹಾಗು ಬಿಳೆಪ ದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳುಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸಿಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧತೊಲೆ ತೊಗೊಂಡು ಮೇಲ ಅಕಳ ಅಧಾರ ಎಮ್ಮೆಯಹಾಲನ್ನು ೧೦ ರಿಂದ ೨೦ ತೊಲೆಯ ವರೆಗೆ ತೊಗೋಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟ್ಲಿಗೆ ೧೧ ರೂ. ಹಾಗೂ ಒಂದು ಬಾಟ್ಲಿ ಸಕ್ಕರೆ ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಮ್ಯಾನೇಜರ:- ಅಮೃತಸಿಂಧು ಡಿಪೋ. ೪ ಸಿ. ಡಿವಿಜನ್ ಪುಣೆ ಏಜಾಪುರ ಜಿಲ್ಲೆಯ ಏಜಂಟರು:— ಎಸ್. ಬಿ. ತವನಂದಿ ಪೋಷ್ಟ ನಿಪ್ಪಾಣಿ, ಜಿ. ಬೆಳಗಾಂವ. ಮಹಾಲಕ್ಷ್ಮೀ ಸ್ಟೋರ್ಸ ಬಾಗಲಕೋಟೆ.

ಈ ಪತ್ರಿಕೆಯು ಬಳವಂತ ಅಣ್ಣಾರಾವ ಪುಣಜಮಹಾರ. ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಾ ಯಂತ್ರಾಲಯದಲ್ಲಿ ಮುದ್ರಿತವಾಗಿ ಅದರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ ಬಿ ೧೯೪೭. ವಾ. ಚಂ. ಅಂಚೇವೆಚ್ಚ ಸೇರಿ ೪ ರೂ ೧೩ ಆಣೆಮಾತ್ರ
ಪ್ರತಿ ಬುಧವಾರ ಹಾಗೂ ರವಿವಾರ ಹೀಗೆ ವಾರದಲ್ಲಿ ಎರಡು ಸಲ ಪ್ರಕಟಿಸಲ್ಪಡುವದು

यद्यत् परवशं दुःखं । यद्यदात्मवशं सुखम् ॥ – मनु.

ಕನ್ನಡಿಗ

KANNADIGA BI-WEEKLY

ಸಂಪಾದಕರು:– ಬಳವಂತ ಅಣ್ಣಾರಾವ ಮುಜುಮದಾರ

ಪುಟ ೬ { ಬಾಗಲಕೋಟೆ ಬುಧವಾರ ದಿನಿ ಆಷಾಢ ಬಹುಳ ೧೨ ಶಕೆ ೧೮೫೨ ತಾ. ೨೩-೭-೧೯೩೦ } ಸಂಚಿಕೆ ೩೧
Kannadiga Date 23—7—1930.

ಬಾಲಗೃಹ ಚೂರ್ಣ
ಬಾ. ಕ. ೧—೪—೦

ಡಾ. ಬೈಲೂರ.

ಥಂಡಿ ಉರಿಯ ಗುಳಿಗೆಗಳು
ಬಾ. ಕ. ೦—೮—೦

ಇವರ ಔಷಧಗಳು

ಕಾಫ್‌ಸಾಯಿರಪ್ :– ನೆಗಡಿ, ಗೊಬ್ಬರ, ಮೈಲಿ, ಹವೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟೆ ಹಾರುವಿಕೆ (ಡಬಾ), ಕೋಡಗಗೆಮ್ಮು, ಇವುಗಳಮೇಲೆ ಹೊರ್ತಾಗಿ ಸಣ್ಣ ಹುಡುಗರ ಅಥವಾ ದೊಡ್ಡ ಮನುಷ್ಯರ ನಿಮೋನಿಯಾ ಬೇನೆಯಮೇಲೆ ನಮ್ಮ ಕಾಫ್‌ಸಾಯಿರಪ್ ಔಷಧದ ಉಪಯೋಗವು ಚನ್ನಾಗಿ ಆಗುವದರಿಂದ ಎಲ್ಲರಿಗೂ ತಿಳಿಸಿರುತ್ತೇವೆ. ಈ ಕಾಫ್‌ಸಾಯಿರಪ್‌ನ್ನು ಸಣ್ಣ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ ಪತ್ರಕದಲ್ಲಿ ಬರೆದಂತೆ ಕೊಡಲು ಆತಂಕ ವಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು. ಕ್ಕಿ. ಸಣ್ಣ ಬಾ. ೦ ೬-೦ ದೊಡ್ಡ ಬಾ. ೦-೧೨-೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳ ಬಹುದು.

೩ ರೂ. ಕಂತ ಹೆಚ್ಚಿಗೆ ಔಷಧಗಳನ್ನು ತಕ್ಕೊಳ್ಳುವವರಿಗೆ ೧೨ ಟಕ್ಕೆ ಕಮಿಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.

ಪತ್ತೆ:– ಡಾ॥ ಹರೀ ಮಹಾದೇವ ಬೈಲೂರ. ದ ಬೆಳಗಾವ.

THE POONA SCHOOL OF COMMERCE

Reopens on 16 th. June. Students coached for London Chamber of Commerce and other commercial examinations in banking. Accountancy Shorthand Type-writing etc. Apply for prospectus to:—

Secretary, Budhawar Chowk; Poona-city.

ದಿ. ಬಾಗಲಕೋಟೆ ಕೊ, ಅಪರೇಟಿವ್ಹ ಅರ್ಬನ್ ಬ್ಯಾಂಕ ಲಿಮಿಟೆಡ್ ಬಾಗಲಕೋಟ.

ಠೇವುದಾರರಿಗೆ ಅಖಂಡವಾದ ಭದ್ರತೆ.

ಸ್ವಲ್ಪೇ ಹೆಚ್ಚಿನ ಬಡ್ಡಿಯ ಆಶೆಗಾಗಿ ಅಪರಿಚಯವುಳ್ಳವರ ಕಡೆಗೆ ಠೇವು ಇಟ್ಟು ಗಂಟುಬಡ್ಡಿಯನ್ನು ಕೂಡಿಯೇ ಕಳೆದು ಕೊಳ್ಳಬೇಡಿರಿ. ಪ್ರತಿವರ್ಷವು ನಮ್ಮ ಬ್ಯಾಂಕವನ್ನು ಸರಕಾರಿ ಆಡಿಟರರು ತಪಾಸ ಮಾಡುತ್ತಾರೆ. ಠೇವುದಾರರಿಗೆ ೧೦೦ಕ್ಕೆ ೮ ಟಕ್ಕೆ ಪಂತೆ ಡೆವ್ಹಿಡೇಂಡ ಹಂಚ್ಚುಟ್ಟೆವೆ. ಇದಕ್ಕೆ ಇನ್‌ಕಮ್‌ಟ್ಯಾಕ್ಸ ಬೀಳುವದಿಲ್ಲ.

ಠೇವುಗಳ ಬಡ್ಡೀದರವು ಕೆಳಗಿನಂತಿರುತ್ತದೆ.

ಚಾಲತೀ ಠೇವು	ನೂರಕ್ಕೆ ವರ್ಷಕ್ಕೆ	೨॥
ಶೇವ್ಹಿಂಗ್ಸ ಬ್ಯಾಂಕ ಠೇವು	"	೪ ರಂತೆ
ವರ್ಷದ ಮುದ್ದತ ಠೇವು	"	೬ ರಂತೆ

ಹೆಚ್ಚಿನ ವಾಯ್ದದ ಠೇವಿನ ವೇಳೆಯ ಬಡ್ಡಿಯದರದ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆಗೆ ಸಮಕ್ಷವಾಗಿ ವಿಚಾರ ಮಾಡಬೇಕು. ಹೊಸ ಮ ಠೇವ್ಹಿಂಗ್ಸ ಬ್ಯಾಂಕ ಪೆಟ್ಟಿಗೆಗಳನ್ನು ಕೊಡುತ್ತೇವೆ. ಇದರ ಲಾಭವನ್ನು ಜನರು ತೆಗೆದುಕೊಳ್ಳುವರೆಂದು ಆಶಿಸುತ್ತೇವೆ

ಬಾಗಲಕೋಟ.
ತಾ॥ ೨೨ ೨ ೧೯೩೦

Sd/ D. R. Huddar — ಸೆಕ್ರೇಟರಿ
Sd/ M. S. Mangalwedhekar — ಚೇರಮನ್

ಕಿರ್ಲೋಸ್ಕರ ನೇಗಿಲು.



ಇವುಗಳ ವೈಶಿಷ್ಟ್ಯವು.

೧ ತಿರುಗುವ ಕಾಳವುಳ್ಳದ್ದು.
೨ ಬೆಲೆಯಲ್ಲಿ ವಿದೇಶೀ ರೆಂಟಿಗಿಂತ ಅಗ್ಗ.
೩ ಲಕ್ಷಾವಧಿಜನರು ಹೂಡಿ ಅನುಭವಹೊಂದಿದು ಇರುವ ಕಾರಣ ಈ ನೇಗಿಲುಗಳಿಗೆ ಈ ಹಂಗಾಮಿನಲ್ಲಿ ಕುಂದಿಲ್ಲದೆ ಮಾಗಣೆಯುಂಟು. ಸರ್ವಕ್ಕೆ ಹಂಗಾಮವು ಪ್ರಾರಂಭವಾಗಿರುವದು. ಇವತ್ತೇ ಆರ್ಡರಕೊಟ್ಟು ತರಿಸಿ ಕೊಂಡಲ್ಲಿ ಲಾಭವುಂಟು

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ. ಜಿ. ಸಾತಾರಾ

ಭೂಲೋಕದ ಕಾಮಧೇನ.

ದೇವಲೋಕದ ಕಾಮಧೇನು ಹೇಗೆ ಕೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನು ಕೊಡುವ —

ಕ್ರಯವು ಇನಾಂ!!! ಅಂ. ಪಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಯೆಂಬ ಆರೋಗ್ಯ ಮಾರ್ಗದರ್ಶನ. ಅನೇಕ ಉಪಯುಕ್ತವಾದ ವಿಷಯಗಳವೆ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ.
ಸ್ಟೇಶನಸರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
೧೯೪, ಚೀನಾಬಜಾರ್, ಮದರಾಸು

ನೋಡಿದರೆ ಬಿಡದಿರುವ ಕಾದಂಬರಿಗಳು.

೧	ಮಹಾತ್ಮ ತುಳಸೀದಾಸ	(ಐ. ಕಾ.)	೧—೮—೦
೨	ಜಲಂಧರ ನಾಟಕ	(ಪು ನಾ.)	೦—೧೦—೦
೩	ವಡಗಾವದ ವಿಜಯ	(ಐ ಕಾ)	೧—೪—೦
೪	ಅಂಬಿಕೆ	(ಪ. ಕಾ)	[illegible]
೫	ಸೌಭಾಗ್ಯ ತಿಲಕ	(ಸಾ. ಕಾ)	[illegible]
೬	ನರವೀರ ಕಾಶೀಮ	(ಐ, ಕಾ)	೧—೪—೦
೭	ಭಗವಾನದಾಸ	(ಪ ಕಾ)	೧—೦—೦
೮	ಗ್ರಹಲೀಲೆ	(ಸಾ ಕಾ)	೦—೧೨—೦
೯	ಕಂಕಣಚೋರ	(ಐ ಕಾ)	೧—೪—೦
೧೦	ಭಯಂಕರ ಕೊಲೆ	(ಪ ಕಾ)	೦—೧೨—೦
೧೧	ಇಂದುಮುಖಿ	(ತ ಕಾ)	೦—೧೦—೦
೧೨	ಪದ್ಮಿಣಿ ಕಮಲಾ	(ಸಾ ಕಾ)	೧—೦—೦

ಇನ್ನೂ ನೂರಾರು ಬೇರೆ ಪುಸ್ತಕಗಳು ನಮ್ಮಲ್ಲಿ ಸಿಗುವವು. ಕ್ಯಾಟಲಾಗಿಗೆ ಬರೆಯಿರಿ. ಬುಕ್‌ಸೇಲರರಿಗೆ ಧಾರಾಳವಾದ ಕಮಿಶನ್ ವಿಳಾಸ:— ಭಿ. ಪ. ಕಾಳೆ,
ಪೋಸ್ಟ ಆನಂದವನ, (ಜಿ. ಧಾರವಾಡ)

೭೨ ಪುಟಗಳು. ವಾರ್ಷಿಕ ವರ್ಗಣಿ ೫-೮-೦ (ಅ. ವೆ. ಸೇರಿ)

"ಜಯಕರ್ನಾಟಕ"

ಎಂಬ ಸಚಿತ್ರವಾದ ಮಾಸ ಪತ್ರಿಕೆ

ಉತ್ಕೃಷ್ಟವಾದ ನಾಟಕಗಳು ಮನೋಹರವಾದ ಕಥೆಗಳು ಸ್ತ್ರೀಯರ ಸುಂದರವಾದ ಲೇಖಗಳು, ಮಹತ್ವದ ಶಾಸ್ತ್ರೀಯ, ಧಾರ್ಮಿಕ, ರಾಜಕೀಯ ಲೇಖಗಳು ಬರುತ್ತಿರುವವು. ಕರ್ನಾಟಕದ ಸುಪ್ರಸಿದ್ಧ ಲೇಖಕರೆಲ್ಲರೂ ಬರೆಯುತ್ತಿರುತ್ತಾರೆ. ಮಂಗಳಾದಿ ಮುದ್ರಾದಮುದ್ರಣ.

ಸ್ವಸಾಹಸಕರು; ಜಯಕರ್ನಾಟಕ ಸಾಧನಕೇರಿ ಧಾರವಾಡ.

ಕನ್ನಡಿಗ.

ಬಾಗಲಕೋಟೆ:—ಕನ್ನಡಿಗ ಆಷಾಢ ಬಹುಳ ೧೨ ಶಕ ೧೮೫೨

ಕನ್ನ ಮನಸಿನ ಮೇಲೆ ಮೂಡಿ ಕಟ್ಟುವೆನಾನು।
ಕನ್ನ ಬೆಳಗನ ಮಾಡಿದಂಥ ಮುಕ್ಕಳೆದೊಮ್ಮೆ।
ಕನ್ನಮಾಡರು ಕನ್ನ ಮೇಲಿಟ್ಟಿಯನೊಂದು ಚಿನ್ನಯಾಕಾಶದಲ್ಲಿ।
ಕನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ಕನ್ನಸ್ವಾಮಿವು ನಿನ್ನ ಗಂಧವನು ಬೀರಬಹುದಗಂಧವದಪದೆಂದು ತಿಳಿಯೆ

ದಕ್ಷಿಣ ಆಫ್ರಿಕಾದಿಂದಲೂ
ಸತ್ಯಾಗ್ರಹಿಗಳು ಬಂದರು

ಶ್ರೀ ಶರ್ಮಾರಸಿಂಗ ಮತ್ತು ಪ್ರೊರಾ ಎಂಬುವವರನ್ನು ತಮ್ಮ ಧುರೀಣರನ್ನಾಗಿ ಮಾಡಿಕೊಂಡು ದಕ್ಷಿಣ ಆಫ್ರಿಕಾದಿಂದ ೧೧ ಜನ ಸತ್ಯಾಗ್ರಹಿಗಳು ಮುಂಬಯಿಗೆ ತಾ॥ ೧೯ ನೆಯ ದಿವಸ ಬಂದು ಕಾಂಗ್ರೆಸ್ ಭುವನಕ್ಕೆ ಹೋಗಿ ಅಲ್ಲಿ ಸತ್ಯಾಗ್ರಹಿಗಳಾಗಿ ಸೇರಿದರು.

ಬಂಗಾಲ ಸರಕಾರದವರು
ಬುದ್ಧಿಯನ್ನು ಕಳೆದುಕೊಂಡರು

ಸರಕಾರಿ ಅಧಿಕಾರಿಗಳ ವರ್ತನೆಯ ವಿಷಯವಾಗಿ ಬಂಗಾಲ ಸರಕಾರದವರು ಮೊನ್ನೆ ಮೊನ್ನೆ ಒಂದು ಪತ್ರಿಕೆಯನ್ನು ಹೊರಡಿಸಿದ್ದು, ಅದರಲ್ಲಿ ಅವರು "ರಾಜಕೀಯ ಚಳವಳಿಯಲ್ಲಿ ಯಾವ ಸರಕಾರಿ ಅಧಿಕಾರಿಯು ಭಾಗ ತೆಗೆದುಕೊಳ್ಳಕೂಡದು. ಇಷ್ಟೇ ಅಲ್ಲದೆ ತನ್ನ ಮೇಲೆ ಅವಲಂಬಿಸಿದ ಜನರಾಗಲಿ, ತನ್ನ ಬಂಧುಬಳಗದವರಾಗಲಿ, ಇಲ್ಲದೆ ಅಪ್ಪೇಷ್ಟರಾಗಲಿ ಇವರೆಲ್ಲರೂ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳದಂತೆ ಅವನು ಎಚ್ಚರದಿಂದ ಇರತಕ್ಕದ್ದು. ಯಾರಾದರೂ ಹೀಗೆ ಭಾಗ ತೆಗೆದುಕೊಂಡಿದ್ದುದು ಮೇಲಧಿಕಾರಿಗಳಿಗೆ ತಿಳಿದು ಬಂದಲ್ಲಿ ಅವನು ದೋಷಕ್ಕೆ ಪಾತ್ರನಾಗುವುದಲ್ಲದೆ ಶಿಕ್ಷೆಗೆ ಗುರಿಯಾಗುವನು." ಎಂಬುದಾಗಿ ಕಾಣಿಸುತ್ತಿದ್ದಾರೆ. ಇನ್ನು ಮೇಲೆ ಸರಕಾರಿ ಅಧಿಕಾರಿಗಳು ತಮಗೆ ಸಂಬಂಧಿಸಿದವರು ಭಾಗ ತೆಗೆದುಕೊಳ್ಳದಂತೆ ನೋಡಿಕೊಳ್ಳಲು ಕಚೇರಿಗಳಲ್ಲಿ ಗೀಚುವದನ್ನು ಬಿಟ್ಟುಗೊಟ್ಟು ಸದಾಕಾಲ ಮನೆಯಲ್ಲಿಯೇ ಇರಬೇಕಾಯಿತು! ಇಲ್ಲವೆ ಅವರು ತಮ್ಮ ಜನರ ಚಲನವಲನಗಳನ್ನು ನಿರೀಕ್ಷಿಸಲು ಕಂಬಳವನ್ನು ಕೊಟ್ಟು ಒಬ್ಬ ಸೇವಕನನ್ನು ಇಡಬೇಕಾಯಿತು! ತಾವು ಹೊರಡಿಸಿದ ಅಪ್ಪಣೆಯಲ್ಲಿರುವ ಈ ಅಸಂಬದ್ಧತೆಯು ಸರಕಾರದ ಪಂಡಿತರಿಗೆ ಹೇಗೆ ತಿಳಿಯಲಿಲ್ಲವೋ ಏನೋ? ಬುದ್ಧಿಯೇ ಭ್ರಂಶವಾಗುತ್ತಿರುವಾಗ ಎಳ್ಳೆಷ್ಟು ತಿಳಿವು? ಎಲ್ಲಿಯ ಹೊಳೆವು?

ಅಖಿಲಭಾರತ
ವೀರಶೈವ ರಾಜಕೀಯ ಪರಿಷತ್ತು.
ಹಾವೇರಿ.

ಪ್ರತಿಯೊಂದು ರಾಷ್ಟ್ರದ ಸುಖದುಃಖಗಳು ಆಯಾ ದೇಶದ ರಾಜಕೀಯ ಪರಿಸ್ಥಿತಿಯನ್ನವಲಂಬಿಸಿರುವವು. ಭರತಖಂಡದ ಸಮೃದ್ಧಿ ಅಡಳಿತದಿಂದ ಯಾವತ್ತೂ ಉದ್ಯೋಗ ವ್ಯವಹಾರಗಳಿಗೆ ಪರಿಣಾಮ ಉಂಟಾಗಿದೆ. ಇಡೀ ಭರತಖಂಡವು ಈಗ ಎಚ್ಚತ್ತಿದೆ. ಮುಸಲ್ಮಾನ, ಸಿಖ, ಪಾರ್ಸಿ, ಕ್ರಿಶ್ಚಿಯನ್ ಮೊದಲಾದ ಭಿನ್ನ ಭಿನ್ನ ಸಮಾಜಗಳು ಜಾಗೃತವಾಗಿ ರಾಜಕಾರಣದಲ್ಲಿ ಅಂಗವನ್ನು ತೆಗೆದುಕೊಳ್ಳುತ್ತಿರುವವು. ಮತ್ತು ರಾಜಕೀಯ ವಿಷಯದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುತ್ತಿರುವವು. ಒಕ್ಕಲತನ, ವ್ಯಾಪಾರ ವಿಷಯದಲ್ಲಿ ಕರ್ನಾಟಕದಲ್ಲಿ ಮುಂದುವರಿದವರೂ ಬಹುಸಂಖ್ಯಾತರೂ ಆದ ವೀರಶೈವರು ತಮ್ಮ ಅಭಿಪ್ರಾಯವನ್ನು ಜನತೆಯಮುಂದೆ ಇಡುವದು ಅಗತ್ಯವಾಗಿದೆ. ರಾಜಕೀಯ ಪರಿಷತ್ತನ್ನು ಕರ್ನಾಟಕದಲ್ಲೊಂದು ಸ್ಥಳದಲ್ಲಿ ಕರೆಯಬೇಕೆಂಬ ಸೂಚನೆಯು ಪತ್ರಿಕೆಗಳಲ್ಲಿ ಸುಳಿದಾಡಿತು. ಅದನ್ನೇ ಹಾವೇರಿಯ ಮತ್ತು ಹಾವೇರಿಯ ಭಾಗದ ವೀರಶೈವ ಸದ್ಗೃಹಸ್ಥರು ಮನ್ನಿಸಿ ಪರಿಷತ್ತನ್ನು ಇದೇ ಆಗಸ್ಟ ೧೧ ನೆಯ ತಾರೀಖು ಆದಿತ್ಯವಾರ ಕರೆಯಬೇಕೆಂದು ನಿರ್ಣಯಿಸಿದ್ದಾಗಿದೆ. ಸಮಾಜದವರು ಈಗಿನ ಪರಿಸ್ಥಿತಿಯನ್ನು ಸಮಾಲೋಚಿಸಿ ಅಧ್ಯಕ್ಷಸ್ಥಾನಕ್ಕೆ ಯೋಗ್ಯರಾಗುವಂಥ ಸದ್ಗೃಹಸ್ಥರ ಹೆಸರನ್ನು ಇದೇ ತಿಂಗಳ ೨೫ ನೆಯ ತಾ॥ ಸೋಮವಾರದಂದು ತಿಳಿಸುವದಾಗಬೇಕು. ಈ ಪರಿಷತ್ತಿಗೆ ಸಮಾಜದ ಹಿತಚಿಂತಕರು ಅಗತ್ಯವಾಗಿ ಆಗಮಿಸಿ ಈ ಸತ್ಕಾರ್ಯವನ್ನು ಯಶಸ್ವಿಯನ್ನಾಗಿ ಮಾಡಬೇಕು.

೧ ಶಿವಶಂಕರಪ್ಪ ನೇಸರಗಿ ಬಿ. ಎ. ಎಲ್. ಎಲ್. ಬಿ.
ಸ್ವಾಗತಾಧ್ಯಕ್ಷ.
೧ ಬಸವಣ್ಣೆಪ್ಪ ಗಿರ್ಜ ಬಿ. ಎ. ಎಲ್. ಎಲ್. ಬಿ.
೨ ಚನವೀರಪ್ಪ ಹೊಟ್ಟಿ ಬಿ. ಎ. ಎಲ್. ಎಲ್. ಬಿ.
ಕಾರ್ಯದರ್ಶಿಗಳು

ಪ್ರೊಫೆಸರರಿಗೆ ಶಿಕ್ಷೆಯಾಯಿತು

ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜದ ಮುಂದೆ ನಡೆದ ಪಿಕೆಟಿಂಗದ ಸಮಯದಲ್ಲಿ ತಮ್ಮ ಕೊಡೆಯಿಂದ ಸಾರ್ಜಂಟರಿಗೆ ಅವಮಾನ ಮಾಡಿದರೆಂಬ ಆರೋಪದಿಂದ ಸೆರೆ ಹಿಡಿಯಲ್ಪಟ್ಟ, ಕಲಕತ್ತೆಯ ಸಿ. ಎಮ್. ಎಸ್. ಕಾಲೇಜದ ಪ್ರೊಫೆಸರರಾದ ಶ್ರೀ ಆಶಾನಂದ ನಾಗರವರಿಗೆ ೬ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಬೆಂಗಳೂರಿನ "ವಿಶ್ವಕರ್ನಾಟಕ"ಕ್ಕೆ ೨೦೦ ರು. ದಂಡ

ಕೂಡಿಗಲ್ ಅಮಲ್ದಾರರ ವಿಷಯವಾಗಿ ಅಪಮಾನಾಸ್ಪದ ಲೇಖಗಳನ್ನು ಪ್ರಕಟಿಸಿದುದಕ್ಕಾಗಿ ಬೆಂಗಳೂರಿನ 'ವಿಶ್ವಕರ್ನಾಟಕ' ಪತ್ರಿಕೆಯ ಸಂಪಾದಕರಾದ ಶ್ರೀ. ತಿರುಮಲೆ ತಾತಾಚಾರ್ಯ ಶರ್ಮಾರವರಿಗೆ ಬೆಂಗಳೂರಿನ ಪ್ರಥಮ ವರ್ಗದ ಮ್ಯಾಜಿಸ್ಟ್ರೇಟರು ೨೦೦ ರು ದಂಡ, ದಂಡವನ್ನು ಕೊಡದಿದ್ದಲ್ಲಿ ೧ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದ್ದಾರೆ.

ಕರ್ನಾಟಕದಲ್ಲಿ ಸ್ವಾತಂತ್ರ್ಯ-ಸಪ್ತಾಹ

ಇಡೀ ಕರ್ನಾಟಕದಲ್ಲಿ ಜುಲೈ ೨೭ ರಿಂದ ಆಗಸ್ಟ ೨ ನೇ ತಾರೀಖಿನ ಮಧ್ಯರಾತ್ರಿಯ ವರೆಗೆ "ಸ್ವಾತಂತ್ರ್ಯ ಸಪ್ತಾಹ" ವೆಂದು ಆಚರಿಸಲ್ಪಡಬೇಕೆಂಬುದಾಗಿ ಕರ್ನಾಟಕ ಸತ್ಯಾಗ್ರಹ ಮಂಡಳದವರು ನಿಶ್ಚಯಿಸಿದ್ದಾರೆ. ಈ ಸಪ್ತಾಹದ ಕಾರ್ಯ ಕ್ರಮವನ್ನು ಎಲ್ಲ ಕಡೆಯಲ್ಲಿಯೂ ವಿಜೃಂಭಣೆಯಿಂದ ಮಾಡ ತಕ್ಕದ್ದು.

ಕಾರ್ಯಕ್ರಮದ ವಿವರ

ರವಿವಾರ ತಾ|| ೨೭-೭-೩೦ ರಾಷ್ಟ್ರಧ್ವಜ ದಿನ

ಮುಂಜಾನೆ ನಗರ ಸಂಕೀರ್ತನೆ, ಮತ್ತು ೮ ಗಂಟೆಗೆ ಸರಿಯಾಗಿ ಧ್ವಜಾರೋಹಣ. ರಾಷ್ಟ್ರೀಯ ಧ್ವಜ ವ ಗೀತಗ ಳನ್ನು ಮಾರುವದು, ಪ್ರತಿಯೊಂದು ಮನೆಯ ಮೇಲೂ, ಸಾರ್ವ ಜನಿಕ ಸಂಸ್ಥೆಗಳ ಮೇಲೂ ಧ್ವಜಗಳನ್ನು ಹಚ್ಚುವಂತೆ ಪ್ರಯತ್ನಿಸುವದು. ಸಂಜೆಗೆ ಮೆರವಣಿಗೆ ಮತ್ತು ಸಭೆ. ಸಭೆಯಲ್ಲಿ ರಾಷ್ಟ್ರಧ್ವಜದ ಮಹತ್ವವನ್ನು ವಿವರಿಸಿ ಹೇಳುವದು

ಸೋಮವಾರ ತಾ|| ೨೮-೭-೩೦ ಚರಖಾ ಮತ್ತು ಟಕಲಿ ದಿನ

ಮುಂಜಾನೆ ನಗರ ಸಂಕೀರ್ತನೆ, ಖಾದಿಯ ಮಾರಾಟ, ಟಕಲಿ ಅಥವಾ ಚರಖಾ ಇವುಗಳ ಮೇಲೆ ನೂಲು ತೆಗೆಯುವದರ ಮೇಲಾಟ, ಸಂಜೆಗೆ ಮೆರವಣಿಗೆ ಮತ್ತು ಜಾಹೀರ ಸಭೆ. ಸಭೆಯಲ್ಲಿ ಖಾದಿಯ ಮಹತ್ವ ಮತ್ತು ಅದರಿಂದ ಹಿಂದು ಸ್ಥಾನಕ್ಕೆ ಆಗತಕ್ಕ ಲಾಭ, ಇವುಗಳನ್ನೆಲ್ಲ ತಿಳಿಸಿ ಹೇಳುವದು.

ಮಂಗಳವಾರ ತಾ|| ೨೯-೭-೩೦ ಮಂಗಳೂರ ದಿನ

ಮುಂಜಾನೆ ನಗರ ಸಂಕೀರ್ತನೆ, ಸಂಜೆಗೆ ಮೆರವಣಿಗೆ, ಜಾಹೀರ ಸಭೆ. ಸಭೆಯಲ್ಲಿ ಮಂಗಳೂರಿನೊಳಗೆ ಸರಕಾರದವರು ನಡೆಸಿರುವ ದಬ್ಬಾಳಿಕೆ ಮತ್ತು ಅತ್ಯಾಚಾರಗಳನ್ನು ತಿಳಿಸಿ ಹೇಳುವದು. ಈ ದಿವಸ ಕಾಂಗ್ರೆಸ್ಸ ಕಮಿಟಿಗೆ ಸದಸ್ಯರನ್ನು ನೋಂದಾಯಿಸುವ ಕೆಲಸವನ್ನು ಮಾಡತಕ್ಕದ್ದು.

ಬುಧವಾರ ತಾ|| ೩೦-೭-೩೦ ಬಹಿಷ್ಕಾರ ದಿನ

ಮುಂಜಾನೆ ನಗರ ಸಂಕೀರ್ತನೆ, ಸಂಜೆಗೆ ಮೆರವಣಿಗೆ ಜಾಹೀರ ಸಭೆ ಸಭೆಯಲ್ಲಿ ಮದ್ಯಪಾನ ನಿಷೇಧ, ಸರದೇಶೀ ಬಟ್ಟೆ ಮತ್ತು ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸುವ ವಿಷಯ ವನ್ನು ತಿಳುಹಿಸಿ ಹೇಳುವುದು. ಈ ದಿವಸ ಊರಲ್ಲೆಲ್ಲ ಸ್ವದೇಶಿ ಪತ್ರಗಳ ಪ್ರತಿಜ್ಞಾ ಪತ್ರಗಳ ಮೇಲೆ ಸಹಿ ತಕ್ಕೊಳ್ಳಬೇಕು.

ಗುರುವಾರ ತಾ|| ೩೧-೭-೩೦ ರಾಷ್ಟ್ರವೀರರ ದಿನ

ಮುಂಜಾನೆ ನಗರ ಸಂಕೀರ್ತನೆ, ರಾಷ್ಟ್ರವೀರರ ಫೊಟೋ ಗಳನ್ನು ಮಾರುವದು, ಸಂಜೆಗೆ ಮೆರವಣಿಗೆ, ಜಾಹೀರ ಸಭೆ. ಸಭೆಯಲ್ಲಿ ಇಲ್ಲಿಯ ವರೆಗೆ ರಾಷ್ಟ್ರದ ಏಳ್ಗೆಗಾಗಿ ಆತ್ಮಾರ್ಪಣ ಮಾಡಿದ ವೀರರ ನೆನಪು ತಂದುಕೊಡುವದು. ಮತ್ತು ಅವರ ಚರಿತ್ರೆಯನ್ನು ಹೇಳುವದು.

ಶುಕ್ರವಾರ ತಾ|| ೧-೮-೩೦ ಲೋಕಮಾನ್ಯ ಟಿಳಕದಿನ

ಮುಂಜಾನೆ ನಗರ ಸಂಕೀರ್ತನೆ, ಸತ್ಯಾಗ್ರಹ ನಿಧಿಯ ಸಲುವಾಗಿ ಭಿಕ್ಷೆ, ಸಂಜೆಗೆ ಮೆರವಣಿಗೆ, ಜಾಹೀರ ಸಭೆ, ಸಭೆಯಲ್ಲಿ ಲೋಕಮಾನ್ಯರ ಚರಿತ್ರೆಯನ್ನು ವಿಶದವಾಗಿ ತಿಳಿಸಿ ಹೇಳುವದು.

ಶನಿವಾರ ತಾ|| ೨-೮-೩೦ ಕಾಯಿದೆಭಂಗ ದಿನ

ಮುಂಜಾನೆ ನಗರ ಸಂಕೀರ್ತನೆ, ಸಂಜೆಗೆ ಮೆರವಣಿಗೆ, ಜಾಹೀರ ಸಭೆ, ಸಭೆಯಲ್ಲಿ ಇಂದಿನ ವರೆಗೆ ಸತ್ಯಾಗ್ರಹ ಮಂಡಲ ದಿಂದ ಮುರಿಯಲಾದ ಅಪ್ಪಣೆಕೊಟ್ಟ ಕಾಯದೆಗಳನ್ನು ಮುರಿಯು ವದು ಮತ್ತು ಅದರ ಕಾರಣವನ್ನು ತಿಳಿಸಿ ಹೇಳುವದು.

ಆ ಆ ಊರೊಳಗಿನ ಪ್ರತಿಯೊಬ್ಬ ಸದ್ಗೃಹಸ್ಥರೂ, ಬಾಲ ಬಾಲಿಕೆಯರೂ, ಕಾಂಗ್ರೆಸ್ ಕಮಿಟಿಯವರೂ, ಸತ್ಯಾಗ್ರಹ ವಂಡಲದವರೂ, ಭಾಗ ವಂಡಲದವರೂ ಈ ಸ್ವಾತಂತ್ರ್ಯ ಸಪ್ತಾಹದಲ್ಲಿ ಭಾಗ ತೆಗೆದುಕೊಂಡು ಈ ಕಾರ್ಯವು ಪೂರ್ಣ ಯಶಸ್ವಿಯಾಗುವಂತೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳು ತ್ತೇನೆ.

ಹುಬ್ಬಳ್ಳಿ
ತಾ| ೧೬-೭-೧೯೩೦ } ನಾ. ಸು. ಹರ್ಡೀಕರ

ಗುಳೇದಗುಡ್ಡದಲ್ಲಿ

ಹೆಂಗಸರೂ ಪಿಕೆಟಿಂಗ ಮಾಡಹತ್ತಿದರು

(ಸ್ವಂತ ಸುದ್ದಿಗಾರರಿಂದ)

ಗುಳೇದಗುಡ್ಡದಲ್ಲಿ ಮೊನ್ನೆ ದಿವಸ ವತ್ತೇದಾರರು ಊರಲ್ಲಿಯ ಕುಡಕ ಜನರಿಗೆ ಮುಳ್ಳಿಟಿಯಾಗಿ ನಿಂದಿ ಕೊಡುವೆ ಎಂದು ಹೇಳಿದ್ದಕ್ಕೆ ೯—೧೦ ಜನರು ಕುಡಿಯಲಿಕ್ಕೆ ಹೋದರು. ಇದು ಕೂಡಲೆ ದೈವಾಜ್ಞ ಕದವರಿಗೆ ತಿಳಿಯಿತು. ಅವರು ಅವರಲ್ಲಿಗೆ ಹೋಗಿ ಕುಡಿಯುವದಿಲ್ಲವೆಂದು ಆಣೆ ಮಾಡಿಸಿಕೊಂಡರು ಅಲ್ಲದೆ ೫ ರೂ. ದಂಡ ಕಟ್ಟಿದರು. ಮತ್ತು ಅವರ ಕಡೆಯಿಂದ ೧೦೦ ರೂ. ಬಾಂಡ ಬರೆಯಿಸಿಕೊಂಡರು. ಈಗಂತೂ ಕುಡುಕ ಜನರು ಅಂಗಡಿಗಳ ಸಮೀಪಕ್ಕೆ ಹೋಗುವದೇ ಇಲ್ಲ. ಮೊನ್ನೆ ಶ್ರೀಮತಿ ಸೀತಾಬಾಯಿ ಬಳ್ಳಿಳ್ಳಿಯವರು ಜಹಾದ ದುಷ್ಪರಿಣಾಮದ ಬಗ್ಗೆ ಭಾಷಣ ಮಾಡಿದರು. ಅವರ ಭಾಷಣದ ಪರಿಣಾಮವು ಚೆನ್ನಾಗಿ ಪರಿಣಮಿಸಿತು. ಶ್ರೀಮತಿ ಫತೇಚಂದ ಹಂಪೀಹೊಳಿಯವರು ದೇಶಸೇವೆಗಾಗಿ ಸಿದ್ಧರಾಗಿ ದಿನಾಲು ಪಿಕೆಟಿಂಗ ಕಾರ್ಯವನ್ನು ಕೈಕೊಂಡಿದ್ದಾರೆ. ಈಗ ಸ್ವಯಂ ಸೇವಕರ ಸಂಖ್ಯೆಯು ಬೆಳೆಯುತ್ತಿದೆ.

ಮಿ. ಬ್ರೊಕವೇ ಹಾಗು ಬೆಕೆಟ್ಟರು

ಪಾರ್ಲಿಮೆಂಟದಿಂದ ತಳ್ಳಲ್ಪಟ್ಟರು.

ತಾ॥ ೧೭ ನೆಯ ದಿವಸ ಪಾರ್ಲಿಮೆಂಟದಲ್ಲಿ ಹಿಂದುಸ್ಥಾನದ ಸಂಬಂಧವಾಗಿ ಮಿ. ಮೆಕಡೊನಾಲ್ಡ ಹಾಗು ಮಿ. ಬ್ರೊಕವೇಯವರ ನಡುವೆ ವಾದವಿವಾದವಾಯಿತು. ಆ ವಾದದ ಪರಿಣಾಮವೆಂದರೆ ಮಿ. ಬ್ರೊಕವೇ ಹಾಗು ಮಿ. ಬೆಕೆಟ್ಟ ಪಾರ್ಲಿಮೆಂಟದಿಂದ ತಳ್ಳಲ್ಪಟ್ಟರು. ಅವರಲ್ಲಿ ನಿಜವೆ ವಾದದ ವಿಷಯವಾದ್ದು ಕೆಳಗೆ ಕೊಟ್ಟಿದೆ.

ಮಿ. ಬ್ರೊಕವೇ—ಹಿಂದುಸ್ಥಾನದ ಪರಿಸ್ಥಿತಿಯನ್ನು ಸಬಲಪಡಿಸಲು ಅಪ್ಪಣೆಯನ್ನು ಕೊಡುವಿರಿ?

ಮಿ. ಮೆಕಡೊನಾಲ್ಡ—ಆ ವಿಷಯದ ಬಗ್ಗೆ ತಾ॥ ೧೪ ಕ್ಕೆ ಚರ್ಚೆಯಾಗಿ ಹೋಗಿದೆ.

ಮಿ. ಬ್ರೊಕವೇ—ಆ ಮೇಲೆ ಹಿಂದುಸ್ಥಾನದಲ್ಲಿ ಚರ್ಚೆಗೆ ಯೋಗ್ಯವಾದಂತಹ ಆವ ಮಹತ್ವದ ಸಂಗತಿಗಳಾದರೂ ಜರುಗಿದ್ದವೇ?

ಮಿ. ಮೆಕಡೊನಾಲ್ಡ—ಯಾವವೂ ಜರುಗಿದ್ದಿಲ್ಲ ನಡೆದ ಸಂಗತಿಗಳೆಲ್ಲ ನಮ್ಮ ವಿರುದ್ಧವಾಗಿಯೇ ಇವೆ

ಮಿ. ಬ್ರೊಕವೇ—ಈಗ ಹಿಂದುಸ್ಥಾನದಲ್ಲಿ ಒಟ್ಟಿಗೆ ೫೦೦ ಜನರಿಗೆ ಸೆರೆ ಮನೆಯಾಗಿದೆ. ಸಂಧಾನದ ಆಶೆಯಂತೂ ಕಾಣಬರುವದಿಲ್ಲ. ಈಗ ಹಿಂದುಸ್ಥಾನದ ವಿಷಯವಾಗಿ ಚರ್ಚೆಮಾಡಲು ಅಪ್ಪಣೆ ಸಿಗದಿದ್ದರೆ, ಮುಂದೆಯಾದರೂ ಸಿಗುವದಿಲ್ಲವಾಗಿ ತೋರುತ್ತದೆ.

ಮಿ. ಮೆಕಡೊನಾಲ್ಡ— ನಿರಾಶರಾಗಲು ಕಾರಣವಿಲ್ಲ. ಯಾಕಂದರೆ ನಿಜವಾದ ಸ್ಥಿತಿಯು ಬೇರೆಯೇ ಇದೆ.

ಆ ಮೇಲೆ ಮಿ. ಬ್ರೊಕವೆಯವರು ಮೂರೂ ಹುಂಗಡವವರು ತಮ್ಮ ತಮ್ಮೊಳಗೆ ಮಾಡಿಕೊಂಡ ಕರಾರುಗಳ ವಿಷಯವಾಗಿ ನಿಷೇಧವನ್ನು ವ್ಯಕ್ತಪಡಿಸಿದರು.

ಬಳಿಕ ಮತ್ತೆ ಮಿ. ಬ್ರೊಕವೆಯವರು ಎದ್ದುನಿಂತು "ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯು ಈಗ ತೀರ ಭಯಂಕರವಾಗಿದೆ. ಅಲ್ಲಿಯ ಸ್ಥಿತಿಯ ಬಗ್ಗೆ ವಿಚಾರಿಸುವದು ನಮ್ಮಗಳ ಕರ್ತವ್ಯವಾಗಿದೆ. ನಮ್ಮ ಅಭಿಪ್ರಾಯಗಳನ್ನು ಈ ಸಮಯದಲ್ಲಿ ವ್ಯಕ್ತಪಡಿಸುವದು ಕರ್ತವ್ಯ ಹೀನರಾಗುವೆವು" ಎಂದು ಭಾಷಣಮಾಡಿದರು. ನನ್ನ ನಿರ್ಣಯವನ್ನು ಕೇಳದಿದ್ದಲ್ಲಿ ನಿಮ್ಮನ್ನು ಹೆಸರು ತೆಗೆದುಕೊಂಡು ಕರೆಯುವ ಬೇಕಾಗುವದು ಎಂದು ಸ್ಪೀಕರರು ಅವರಿಗೆ ಎಚ್ಚರಿಕೆಕೊಟ್ಟರು. ಬ್ರಾಕವೇಯವರು ತಮ್ಮ ವಿರೋಧವನ್ನು ಹಾಗೆಯೆ ಸಾರಿಸಿದರು. ಸಭಾಸದರು ಅವರ ಹೆಸರು ತೆಗೆಯಿರಿ" ಎಂದು ಕೂಗಿದರು. ಸ್ಪೀಕರರು ಅವರ ಹೆಸರನ್ನು ತೆಗೆದರು. ಮಿ. ಮೆಕಡೊನಾಲ್ಡರು ಅವರನ್ನು ಸಭಾಸದರಿಂದ ಕಡಿಮೆ ಮಾಡಿದರು. ಕೂಡಲೆ ಮಿ. ಬೆಕೆಟ್ಟರು ಜೋರಾಗಿ ಕೂಗಿದರು. ಕಾನ್ಸರ್ವೇಟಿವ್ಹ ಪಕ್ಷದವರೂ, ಕೂಲಿಕಾರ ಪಕ್ಷದವರೂ "ಬೆಕಟ್ಟರನ್ನು ಹೊರಗೆ ದಬ್ಬಿರಿ" ಎಂದು ಕೂಗಿದರು. ಮಿ. ಬೆಕೆಟ್ಟರು ಭುಗಾಂದ ಗದೆಯನ್ನು ತೆಗೆದುಕೊಂಡು ಹೊರಬಿದ್ದರು. ಬಳಿಕ ಮಿ. ಬೆಕೆಟ್ಟರೂ ಸಭಾಸದರಿಂದ ಕಡಿಮೆಮಾಡಲ್ಪಟ್ಟರು.

ಮುಂಬಯಿಯ

'ನವಾಕಾಳ'ಕ್ಕೆ ೫೦೦ ರು. ಗಳ ಅಡವು

ವೃತ್ತಪತ್ರ ದಬ್ಬಾಳಿಕೆಯ ಕಾನೂನಿಗನುಸಾರವಾಗಿ ತಾ॥ ೧೭ ನೆಯ ದಿವಸ ಮುಂಬಯಿಯಲ್ಲಿರುವ ದೈನಿಕ ಪತ್ರಿಕೆಯಾದ "ನವಾಕಾಳ"ದ ಸಂಪಾದಕರಾದ ಶ್ರೀ. ಖಾಡಿಲಕರರಿಗೆ ಅವರ ಪತ್ರಿಕೆ ಹಾಗು ಮುದ್ರಣಾಲಯಗಳ ಬಗ್ಗೆ ಬೇರೆ ಬೇರೆಯಾಗಿ ೫೦೦ ರು. ಗಳ ಎರಡು ಅಡವುಗಳು ಕೇಳಲ್ಪಟ್ಟಿದ್ದರಿಂದ ಶ್ರೀ. ಖಾಡಿಲಕರರು ತಾ॥ ೧೮ ನೆಯ ದಿವಸ ಚೀಫಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕಛೇರಿಗೆ ಹೋಗಿ ೫೦೦ ರು. ಗಳನ್ನು ಕೊಟ್ಟವರಾಗಿ ತಿಳಿಯುತ್ತದೆ.

ಪುಂಡುಗಾರ ವಿಸಾಜಿಯು

ಶಿವಾಜಿಯಾಗಲು ಹವಣಿಸಿದನು

ಪುಣೆಯ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರಾದ ಶ್ರೀ. ಕೆ. ಬಿ ಪುರೋಹಿತರ ಮುಂದೆ ಕೆಲವು ಪುಂಡುಗಾರರ ಖಟ್ಲೆಯ ವಿಚಾರಣೆಯು ನಡೆದಿದೆ. ವಿಸಾಜಿ ಶಿಂದೆಯೆಂಬವನೊಬ್ಬನು ಆ ಪುಂಡುಗಾರರ ಮುಖ್ಯಸ್ಥನು. ಲಾಯಸೆನ್ಸ ಪಡೆದುಕೊಳ್ಳದೆ ಶಸ್ತ್ರಾಸ್ತ್ರಗಳ ಸಹಿತವಾಗಿ ಜೆಪ್ಪಿಯಲ್ಲಿ ತಿರುಗಾಡಿದುದಕ್ಕಾಗಿ ಅವರೆಲ್ಲರೂ ಸೆರೆಹಿಡಿಯಲ್ಪಟ್ಟಿದ್ದಾರೆ. ಸೋನಾಂ ಕಿಲ್ಲೆಗೆ ಹೋಗಿ ಅದನ್ನು ಮರಳಿಸಿಕೊಳ್ಳುವದು ಹಾಗು ಸರಕಾರಿ ಅಧಿಕಾರಿಗಳಿಗೆ ಪೀಡೆ ಕೊಡುವದೇ ಅವರ ಉದ್ದೇಶವಾಗಿತ್ತಾಗಿ ತಿಳಿಯುತ್ತದೆ. ನಿಜಾಮ ಸಂಸ್ಥಾನಕ್ಕೆ ಹೋಗಿ ಅಲ್ಲಿಂದ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಪುಣೆಗೆ ಬಂದು ಅಲ್ಲಿ ಮೆರವಣಿಗೆಯಿಂದ ಹೊರಟು ಶಸ್ತ್ರಾಸ್ತ್ರಗಳ ಕಾಯುದೆಯನ್ನು ಮೀರಿಸುವದೂ ಮತ್ತು ಆ ಕಾಯುದೆಯನ್ನು ಮೀರಿಸಲು ಜನರಿಗೆ ಬೋಧಿಸುವದೂ ತಮ್ಮ ಉದ್ದೇಶವಾಗಿತ್ತೆಂದು ಸೆರೆಯಾದವರು ವಿಚಾರಣೆಯ ಕಾಲಕ್ಕೆ ಹೇಳಿದರು. ಮ್ಯಾಜಿಸ್ಟ್ರೇಟರು ಇನ್ನೂ ತೀರ್ಪು ಹೇಳಿಲ್ಲ.

ಜೇಲಿನಲ್ಲಿ

ಸತ್ಯಾಗ್ರಹಿಯು ಮರಣ ಹೊಂದಿದನು.

ತಾ॥ ೧೭ ನೆಯ ದಿವಸ ಮುಂಬಯಿಯ ಆರ್ಥರ ಜೇಲಿನಲ್ಲಿ "ಕಿಶೋರಿ ಯೇರಾ" ಎಂಬ ಹೆಸರಿನ ಓರ್ವ ಸತ್ಯಾಗ್ರಹಿಯು ಮರಣ ಹೊಂದಿದನು. ಪಡಾಲಾ ಉಪ್ಪಿನ ಪಹಾಡದ ಮೇಲೆ ದಾಳಿಯನ್ನು ಮಾಡಿದುದಕ್ಕಾಗಿ ಅವನಿಗೆ ಶಿಕ್ಷೆಯಾಗಿತ್ತು. ಮೂತ್ರ ದೇನೆಯೆ ಅವನ ಮರಣಕ್ಕೆ ಕಾರಣವಾಯಿತಂತೆ!

ಮುದ್ರಣ ಬಕಾಸುರನಿಗೆ

'ಕರ್ನಾಟಕ ಧುರೀಣ'ದ ಆಹುತಿಯು

ಕುವಟೆಯಲ್ಲಿ ಶ್ರೀ ಗಣೇಶ ರಾಮ ಯಾಜಿಯವರ ಸಂಪಾದಕತ್ವದಲ್ಲಿ ಪ್ರಸಿದ್ಧವಾಗುತ್ತಿದ್ದ ರಾಷ್ಟ್ರೀಯ ಪಕ್ಷದ ಪ್ರಮುಖ ವಾರಪತ್ರಿಕೆಯಾದ "ಕರ್ನಾಟಕ ಧುರೀಣ"ಕ್ಕೆ ವೃತ್ತಪತ್ರ ದಬ್ಬಾಳಿಕೆಯ ಕಾನೂನಿಗನುಸಾರವಾಗಿ ೫ ೧೬೬ ಕ್ಕೆ ಅಡವು ಕೇಳಲ್ಪಟ್ಟಿದೆ ಕಾರವಾರ ಜಿಲ್ಲೆಯ ಎರಡೂ ಪತ್ರಿಕೆಗಳು ಮುದ್ರಣ ಬಕಾಸುರನಿಗೆ ಬಲಿಯಾದಂತಾದವು.

ಉಪ್ಪಿನ ಅಧಿಕಾರಿಯು ರಾಜೀನಾಮೆ ಕೊಟ್ಟನು

ಮದ್ರಾಸ ಇಲಾಖೆಯ ಪಶ್ಚಿಮ. ಗೋದಾವರಿ ಜಿಲ್ಲೆಯಲ್ಲಿ ಉಪ್ಪಿನ ಖಾತೆಯಲ್ಲಿ ಕೆಲಸಮಾಡುತ್ತಿದ್ದ ಶ್ರೀ ದುರ್ಗಾಪ್ರಸಾದರು ಸರಕಾರದ ದಬ್ಬಾಳಿಕೆಯನ್ನು ನಿಷೆಧಿಸಿ ತಮ್ಮ ಉದ್ಯೋಗಕ್ಕೆ ರಾಜಿನಾಮೆ ಹೊಡೆದಿದ್ದಾರೆ. ಮದ್ರಾಸ ಸರಕಾರದವರು ಅವರ ರಾಜೀನಾಮೆಯನ್ನು ಸ್ವೀಕರಿಸಿ, ಅವರನ್ನು ಇನ್ನು ಮುಂದೆ ಯಾವ ಸರಕಾರಿ ಹುದ್ದೆಯ ಮೇಲೆಯೂ ನಿಯಮಿಸಿಕೊಳ್ಳತಕ್ಕದ್ದಲ್ಲವಾಗಿ ಆಜ್ಞೆಯನ್ನು ತೆಗೆದಿದ್ದಾರೆ.

ಗದುಗಿನಲ್ಲಿ

'ನಂಗುಂದ ಬಂಡಾಯ'ದಾಟಕ್ಕೆ ಅಡ್ಡಿ

ನಾಟಕಕಾರರೆಂದು ಹೆಸರು ಪಡೆದ ಗದಗಿನ ಶ್ರೀ ಹುಯಿಲಗೋಳ ನಾರಾಯಣರಾಯರಿಂದ ರಚಿತವಾಗಿರುವ "ನಂಗುಂದ ಬಂಡಾಯ" ಎಂಬ ನಾಟಕವನ್ನು ಗದುಗಿನ ರಂಗಭೂಮಿಯ ಮೇಲೆ ಪ್ರಯೋಗಿಸಲಿಚ್ಛಿಸಿದ ನಾಟ್ಯ ಸೇವಕರಿಗೆ ಹಾಗೆ ಮಾಡಲು ಅಲ್ಲಿಯ ಅಧಿಕಾರಿಗಳು ಅಪ್ಪಣೆಯನ್ನು ಕೊಡಲಿಲ್ಲವಂತೆ! ಕನ್ನಡಿಗರೆ, ಇಷ್ಟು ದಿನಗಳ ವರೆಗೆ ನೀವು ಕನ್ನಡದಲ್ಲಿ ಐತಿಹಾಸಿಕ ನಾಟಕಗಳೇ ಇಲ್ಲವೆಂದು ಸಾಂಸ್ಕೃತಿಕರನ್ನು ಟೀಕಿಸುತ್ತಿದ್ದಿರಲ್ಲವೆ? ಹೇಳಿರಿಗೇನು ಮಾಡುವಿರಿ! ದೇವರು ವರ ಕೊಟ್ಟರೂ ಪೂಜಾರಿಯು ವರ ಕೊಡಲಿಲ್ಲವೆಂಬಂತಾಗಿದೆ.

ಬೆಳಗಾವಿಯ ಮ್ಯಾಜಿಸ್ಟ್ರೇಟರು

ಸುರಾಪಾನಕ್ಕೆ ಸಹಾಯ

ಮಾಡಹತ್ತಿದರು

ಬೆಳಗಾವಿ ಜಿಲ್ಲೆಯಲ್ಲಿ ಸಿಂದೀ ಅಂಗಡಿಗಳ ಮುಂದೆ ಪಿಕೆಟಿಂಗ ಜೋರಿನಿಂದ ನಡೆದಿದ್ದರಿಂದ ಅಲ್ಲಿ ಸಿಂದಿಯ ವ್ಯಾಪಾರವು ಕಡಿಮೆಯಾಗಹತ್ತಿದೆ. ಅಲ್ಲಿ ಸಿಂದೀ ಅಂಗಡಿಗಳನ್ನು ಹಿಡಿದವರಿಗೆ ಅತ್ಯಂತ ಹಾನಿಯಾಗಹತ್ತಿದೆ. ಹಾನಿಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಕೆಲವು ಅಂಗಡಿಕಾರರು ಸರಕಾರಿ ನಿಯಮಗಳನ್ನು ಬದಿಗಿಟ್ಟು ಅಂಗಡಿಗಳನ್ನು ಬಹಳ ಹೊತ್ತಿನ ವರೆಗೆ ತೆರೆದಿಟ್ಟು ವ್ಯಾಪಾರ ಮಾಡುವದನ್ನು ನಡಿಸಿರುವರು. ನಿಪ್ಪಾಣಿಯ ಸಿಂದಿಯ ಅಂಗಡಿಯವರೊಬ್ಬರನ್ನು ಮೇಲಿನವರಲ್ಲಿ ಎಚ್ಚರಿಸಹತ್ತಿದ್ದರು. ಅವರು ಸರಕಾರಿ ನಿಯಮವನ್ನು ಬದಿಗಿಟ್ಟು ಗೊತ್ತು ಮಾಡಿದ ವೇಳೆಗಿಂತ ಬೇಗನೆ ಅಂಗಡಿಯನ್ನು ತೆರೆಯುವರಲ್ಲದೆ ಗೊತ್ತು ಮಾಡಿದ ವೇಳೆಗಿಂತ ತಡವಾಗಿ ಅಂಗಡಿಯನ್ನು ಮುಚ್ಚುತ್ತಿರುವರು. ಇದನ್ನು ಕಂಡು ನಿಪ್ಪಾಣಿಯ ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿಗಳು ಅಂಗಡಿಯವನ ಈ ವರ್ತನವನ್ನು ಬೆಳಗಾವಿಯ ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಅದಕ್ಕೆ ಉತ್ತರವಾಗಿ ಸಿಂದೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡುತ್ತಿರುವದನ್ನು ನಿಲ್ಲಿಸಿರಲ್ಲಿ ಮಾತ್ರ ಯೋಗ್ಯವ್ಯವಸ್ಥೆಯು ಮಾಡಲ್ಪಡುವದೆಂದು ಮ್ಯಾಜಿಸ್ಟ್ರೇಟರು ತಿಳಿಸಿದ್ದಾರಂತೆ! ಭಲೇ ಮ್ಯಾಜಿಸ್ಟ್ರೇಟರೇ!

ಡಾಕಾದಲ್ಲಿ ನಾದಿರಶಾಹಿಯ ರಾಜ್ಯ

ಕೆಲವು ದಿನಗಳ ವರೆಗೆ ಡಾಕಾ ಪಟ್ಟಣವು ಪುಂಡುಗಾರರ ಆಳಿಕೆಗೆ ಒಳಗಾಗಿತ್ತು. ಆ ಸಮಯದಲ್ಲಿ ಅಲ್ಲಿ ನಡೆದ ಅಕ್ರಮಾಚಾರಗಳನ್ನು ನಾದಿರಶಹನ ದಾಳಿಗೆ ಹೋಲಿಸಬಹುದಾಗಿದೆ. ಅಲ್ಲಿಯ ಪುಂಡರು ಡಾಕಾ ಪಟ್ಟಣವನ್ನು ಕೆಲವು ದಿನಗಳ ವರೆಗೆ ಪೂರ್ಣತಯ ಕೈಯಲ್ಲಿಯೇ ಕೊಟ್ಟಂತಾಗಿತ್ತು. ಒಂದೇ ಸವನೆ ೪ ದಿನಗಳ ವರೆಗೆ ಅಂಚೆಯ ಅಧಿಕಾರಿಗಳಿಗೆ ಕಾಗದಪತ್ರಗಳನ್ನು ಆ ಆ ಪತ್ರಗಳ ಒಡೆಯರಿಗೆ ಮುಟ್ಟಿಸಲು ಬರುವಂತಿದ್ದಿಲ್ಲ. ಜನರೇ ಪೊಸ್ಟಿಗೆ ಹೋಗಿ ಅವುಗಳನ್ನು ತೆಗೆದುಕೊಳ್ಳಬೇಕಾಗುತ್ತಿತ್ತು. ಮರಣಕ್ಕೆ ಹೆದರದವರೇ ಹಾಗೆ ಹೋಗಿ ತೆಗೆದುಕೊಳ್ಳುತ್ತಿದ್ದರು. ಅಂತಹ ಕಠಿಣ ಪರಿಸ್ಥಿತಿಯು ಡಾಕಾದಲ್ಲಿ ಆ ಕಾಲಕ್ಕೆ ಉಂಟಾಗಿತ್ತು. ೬೦ ಕ್ಕೆ ಕಡಿಮೆಯಿಲ್ಲದಷ್ಟು ಜನರು ಆಗ್ನಿ ಪ್ರಾಣಕ್ಕೆರವಾದರು. ಅರ್ಥ ಕೋಟಿ ರೂಪಾಯಿಗಳ ವರೆಗೆ ಬೆಲೆ ಬಾಳುವ ಸರಕುಗಳ ಹಾಳಾಗಿ ಹೋದವು. ಜನರು ಸಹಾಯಕ್ಕಾಗಿ ಪೋಲೀಸರನ್ನು ಕರೆಕಳಿಸಿದಾಗ "ಕಾಂಗ್ರೆಸದವರನ್ನು ಸಹಾಯಕ್ಕೆ ಕರೆದುಕೊಳ್ಳಿರಿ" ಎಂಬ ಉತ್ತರವು ಜನರಿಗೆ ದೊರೆಯಿತು. ಹಾಗಿದ್ದಲ್ಲಿ ಹೇಳುತ್ತಿದ್ದ ಗುರ್ಖಾ ಅಧಿಕಾರಿಗಳು ಜನರ ಮೇಲೆ ನಡೆದ ಅತ್ಯಾಚಾರಗಳನ್ನು ನೋಡಿ ಹಾಗೆಯೇ ಹೋದರು. ಈ ಅತ್ಯಾಚಾರವನ್ನು ನಿಲ್ಲಿಸಲು ತಮಗೆ ಮೇಲಧಿಕಾರಿಗಳಿಂದ ಅಪ್ಪಣೆಯು ದೊರೆತಿಲ್ಲವಾಗಿ ಅವರು ಹೇಳಿದರು. ಒಂದೇ ಹಳ್ಳಿಯಲ್ಲಿ ಮನೆಗಳು ಲೂಟಿ ಮಾಡಲ್ಪಟ್ಟವು ಈ ಲೂಟಿಗಳೆಲ್ಲ ಹಗಲಿನಲ್ಲಿಯೇ ನಡೆದವು. ಜನರ ಸಮುದಾಯದಲ್ಲಿ ಪೋಲೀಸರಿದ್ದರೂ ಕೆಲವರಿದ್ದರು. ಅವರು ಗೂಂಡಾಲವನ್ನು ಶಾಂತಪಡಿಸಲು ಏನನ್ನೂ ಮಾಡಲಿಲ್ಲ. ಜನರಿಗೆ ಸರಕಾರಿ ವಿಚಾರಣೆಯ ಮಂಡಳವು ಬೇಕಾಗಿದ್ದಿಲ್ಲ. ಬಂಗಾಲದ ಗವರ್ನರರವಾಗಲಿ, ಇಲ್ಲವೆ ಒಬ್ಬನೊಬ್ಬ ಸರಕಾರಿ ಅಧಿಕಾರಿಯಾಗಲೀ ದಂಗೆಯ ನಂತರದಲ್ಲಿ ಡಾಕಾ ಪಟ್ಟಣಕ್ಕೆ ಹೋಗಿರುವದೇ ಇಲ್ಲ. ಸರಕಾರಿ ಅಧಿಕಾರಿಗಳ ನ್ಯಾಯವಿಂದ ವರ್ತಿಸ ವರೆಂದು ನಾನು ತಿಳಿದುಕೊಂಡಿದ್ದೆ. ಈ ವೇಳಿನ ಸಂಗತಿಗಳಿಂದ ಆ ನನ್ನ ತಿಳುವಳಿಕೆಯು ತಪ್ಪಾಗಿದೆಯೆಂದು ಈಗ ಹೊಳೆದಿದೆ

—ಶ್ರೀ ಶಿಯೋಗಿಯವರು.

ಕಾಂಗ್ರೆಸದ ಅನುಯಾಯಿಗಳ ಮೇಲೆ

ಕೊಲೆಹಾಗು ದರೋಡೆಯ ಆರೋಪ

ಬಾಂಬಯಿ ಇಲಾಖೆಯ ಗವರ್ನರರು ಪುಣೆಯಲ್ಲಿ ಕೂಡಿದ ಕಾಯದೆ ಮಂಡಳದ ಸಭಾಸದರನ್ನುದ್ದೇಶಿಸಿ ಒಂದು ಭಾಷಣ ಮಾಡಿದರು. ಅವರು ಕಾಯದೆ ಭಂಗ ಚಳವಳಿಯ ವಿಷಯವಾಗಿ ಆಗ ಹೇಳಿದ್ದದರ ಸಾರವನ್ನು ತೆಗೆದು ವಾಚಕರಿಗಾಗಿ ಕೆಳಗೆ ಕೊಟ್ಟಿರುತ್ತೇನೆ—

"ಕಾಯದೆಭಂಗ ಚಳವಳಿಯು ಹಿಂಸೆಯಿಂದ ಪ್ರಾರಂಭವಾಗಿ ಹಿಂಸೆಯಲ್ಲಿಯೇ ಪರಿಣಮಿಸಹತ್ತಿದೆ. ಸೆಂಟ್ರಲ್ ಪ್ರಾಂತದಲ್ಲಿಯ ಪೋಲೀಸರ ಕೊಲೆಗೂ ಹಾಗು ಕಾಯದೆ ಜಿಲ್ಲೆಯಲ್ಲಿಯ ೧೮ ದರೋಡೆಗಳಿಗೂ ಕಾಂಗ್ರೆಸ್ಸೇ ಅಪ್ರತ್ಯಕ್ಷವಾಗಿ ಕಾರಣವಾಗಿದೆ. ಕಾಯದೆಭಂಗ ಚಳವಳಿಯಿಂದ ಬಾಂಬಯಿ ಸರಕಾರಕ್ಕೆ ೨೦ ಲಕ್ಷ ರೂಪಾಯಿಗಳ ವೆಚ್ಚವು ಹೆಚ್ಚಿಗೆ ಆಗುವದಾಗಿ ತಿಳಿದಿದ್ದು, ಪ್ರತಿನಿಧಿಸಭೆಯಲ್ಲಿಯೂ ಜೇಲು, ಮತ್ತು ಪೋಲೀಸರಿಗಾಗಿ ೧೨೦೦ ರೂ. ಗಳನ್ನು ಹೆಚ್ಚಿಗೆ ಖರ್ಚು ಮಾಡುವ ಪರಿಸ್ಥಿತಿಯು ಈಗ ಸರಕಾರದವರಿಗೆ ಬಂದೊದಗಿದೆ. ಕಾಯದೆಭಂಗದ ಚಳವಳಿಯು ನಿಲ್ಲುವ ವರೆಗೆ ಕಾಂಗ್ರೆಸದವರೊಡನೆ ಶಾಂತಿ ಸಂಧಾನದ ಮಾತುಗಳು ನಡೆಯಲಾರವು. ಸ್ವರಾಜ್ಯ ಸ್ವಾತಂತ್ರ್ಯವನ್ನು ಕೊಡಿರೆಂದು ಕೇಳಿದ ಮಾತ್ರಕ್ಕೆ ಸರ್ಕಾರ ನಿಮಗೆ ದೊರಕಲಾರದು. ಹಿಂದುಸ್ಥಾನದ ಪ್ರಗತಿಗೆ ಸಾಯಮನ್ ಪರದಿಯಿಂದ ಯಾವ ಧಕ್ಕೆಯೂ ಉಂಟಾಗಿಲ್ಲ."

ಪೋಲೀಸರು ಹೆಂಗಸರನ್ನು ಅಡವಿಗಾಲು ಮಾಡಿದರು

ಬಂಗಾಲ ಪ್ರಾಂತಕ್ಕೆ ಸೇರಿದ ಮಿದನಾಪುರದ ಕಾಲೇಜದ ಮುಂದೆ ಪಿಕೆಟಿಂಗನ್ನು ಮಾಡುತ್ತ ನಿಂತಿರುವ ೧೬ ಸ್ವಯಂಸೇವಕಿಯರನ್ನು ಅಲ್ಲಿಯ ಪೊಲೀಸರು ತಾ|| ೧೬ ನೆಯ ದಿವಸ ಸೆರೆಹಿಡಿದು, ಅವರನ್ನು ಮೋಟಾರದಲ್ಲಿ ಕುಳ್ಳಿರಿಸಿಕೊಂಡು ಹೋಗಿ, ಊರಿಂದ ೮ ಮೈಲಿನ ದೂರದಲ್ಲಿರುವ ಗುಡ್ಡಗಾಡು ಅಡವಿಯಲ್ಲಿ ಅವರನ್ನು ಬಿಟ್ಟುಬಿಟ್ಟರಂತೆ. ಆ ಸ್ಥಳದಲ್ಲಿ ಹಾಯ್ದು ಹೋಗುತ್ತಿದ್ದ ಮೋಟಾರಿನವರಿಗೆ ಅವರು ತಮ್ಮನ್ನು ಕರೆದುಕೊಂಡು ಹೋಗಲು ಅಂಗಲಾಚಿ ಬೇಡಿಕೊಂಡರು! ಮೋಟಾರಿನವರು ನಿರಾಕರಿಸಿದರಂತೆ! ಅವರನ್ನು ಕರೆದುಕೊಂಡು ಹೋಗಲಿಲ್ಲ ನಿಮ್ಮ ನಿಮ್ಮ ಮೋಟಾರುಗಳ 'ಲಾಯಸೆನ್ಸ್' ಗಳನ್ನು ರದ್ದುಮಾಡುವೆವೆಂದು ಅಧಿಕಾರಿಗಳು ಮೋಟಾರ ಚಾಲಕರಿಗೆ ಮೊದಲೇ ತಿಳಿಸಿದ್ದರಂತೆ!

ಸತ್ಯಾಗ್ರಹಿಗಳನ್ನು ಇಳಿಸಿಕೊಂಡಿದ್ದಕ್ಕಾಗಿ. ದೇವಾಲಯದ ಅಧಿಕಾರಿಗಳ ಮೇಲೆ ಗದೆ.

ಮಂಗಳೂರಿನಲ್ಲಿ ಸತ್ಯಾಗ್ರಹಿಗಳನ್ನು ತಮ್ಮ ವಿಠ್ಠಲ ರಖುಮಾಯಿ ದೇವಾಲಯದಲ್ಲಿ ಇಳಿಸಿಕೊಂಡಿದುದಕ್ಕಾಗಿ ಆ ದೇವಾಲಯದ ಮೊಕ್ತೇಸರರಾದ ಶ್ರೀ ಉಳ್ಳಾಲ ವಾಸುದೇವನಾಯಕ, ಶೇಷಪ್ರಭು, ವಾಡೋಳಿ ಕೊಗ್ಗ ಕಾವಶಿ ಮತ್ತು ಮತ್ತಿ ಮುಕುಂದ ಪ್ರಭು ಇವರ ಮೇಲೆ ೧೯೬ ನೆಯ ಕಲಮಿನ ಅನ್ವಯ ದೋಷವನ್ನು ಹೊರಿಸಿ ಅಧಿಕಾರಿಗಳು ಅವರನ್ನು ವಿಚಾರಣೆಗೆ ಗುರಿಪಡಿಸಿದ್ದಾರೆ.

ಪುಣೆಯಲ್ಲಿಯ ಬಂಡೀಗಾಲಿಯ ಪರಿಷತ್ತು "ಮಹಾತ್ಮಾ ಗಾಂಧಿಯವರನ್ನು ಬಿಟ್ಟುಬಿಡಿರಿ"

ತಾ|| ೧೬ ಹಾಗು ೧೭ ಈ ದಿವಸಗಳಲ್ಲಿ ಪುಣೆಯಲ್ಲಿ ಮುಂಬಯಿ ಇಲಾಖೆಯ ಒಂಡೀಗಾಲಿಯ ಪರಿಷತ್ತು ಸೇರಿತ್ತು. ನಾ|| ಗನ್ಹಾರರೇ ಈ ಪರಿಷತ್ತನ್ನು ಕೂಡಿಸಿದ್ದರು. ಪರಿಷತ್ತಿಗೆ ಒಟ್ಟು ೭೦ ಮಂದಿ ಎಲ್ಲ ಕಡೆಯ ಪ್ರತಿನಿಧಿಗಳೂ ಹೋಗಿದ್ದರು. ಕರ್ನಾಟಕದಿಂದ ಶ್ರೀ ದಳವಿ ಚಿಕ್ಕೋಡಿ, ಅಂಗಡಿ ಗಿರಿಯಪ್ಪನವರು, ರಾ. ಬ. ಕಂಬಳಿ, ಸರದೇಸಾಯಿ, ಜೋಶಿ ಮೊದಲಾದವರು ಹೋಗಿದ್ದರು. ದೇಶದಲ್ಲಿಯ ಸಧ್ಯದ ಪರಿಸ್ಥಿತಿ ಸಾಯಮನ್ ವರದಿಯ ಶಿಫಾರಸುಗಳು ಮತ್ತು ಒಂಡೀಗಾಲಿಯ ಪರಿಷತ್ತು ಈ ವಿಷಯವಾಗಿ ಅಲ್ಲಿ ಚರ್ಚೆ ನಡೆಯಿತು. ಸಾಯಮನ್ ವರದಿಯು ಅಪೂರ್ಣವೂ, ಅಸಮಾಧಾನಕರವೂ ಆಗಿದೆಯೆಂದು ಬಹುಮತವಾಗಿ ಎಲ್ಲರೂ ಹೇಳಿದ್ದಲ್ಲದೆ, ದೇಶದಲ್ಲಿಯ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರದವರು ನಿಜವಾಗಿ ಬದುಸುತ್ತಿದ್ದಷ್ಟಿ ಮಹಾತ್ಮಾ ಗಾಂಧಿಯವರನ್ನು ಕೂಡಲೆ ಬಿಟ್ಟುಬಿಡಬೇಕಾಗಿಯೂ, ಮತ್ತು ದುಂಡು ಮೇಜಿನ ಪರಿಷತ್ತು ಯಶಸ್ವಿಯಾಗಬೇಕಾದಲ್ಲಿ ಕಾಂಗ್ರೆಸ ಪಕ್ಷದ ಮುಖಂಡರೂ ಅದರಲ್ಲಿ ಸೇರುವಂತೆ ದೇಶದಲ್ಲಿ ವಾತಾವರಣವನ್ನುಂಟುಮಾಡಬೇಕಾಗಿಯೂ ಕೇಳಿಕೊಂಡರು.

ವಿದೇಶಿ ವ್ಯಾಪಾರಿಗಳು "ಗಚ್ಚ" ಹೊಡೆಯ ಹತ್ತಿದರೆ.

ಚಿಕಾಗೊ ದಕ್ಷಿಣದ ಫೆರಬ್ಯಾಂಕ್ಸ ಮೊಸ್ಲೇ ಕಂಪನಿಯ ಅಧಿಕಾರಿಗಳು ಹಿಂದುಸ್ಥಾನದಲ್ಲಿರುವ ತಮ್ಮ ಪ್ರತಿನಿಧಿಗಳಿಗೆ "ಹಿಂದುಸ್ಥಾನದಲ್ಲಿಯ ವ್ಯಾಪಾರದ ಸ್ಥಿತಿಯು ಈಗ ಬಹಳ ಕೆಟ್ಟಿದೆ. ಅಲ್ಲಿ ಇನ್ನು ಸುಳಿಯುವದರಿಂದ ಯಾವ ಲಾಭವೂ ಇಲ್ಲ. ಆದುದರಿಂದ ನೀವೆಲ್ಲರೂ ಕೂಡಲೆ ಹಿಂದುಸ್ಥಾನವನ್ನು ಬಿಟ್ಟುಗೊಟ್ಟು ಚೀನ, ಜಪಾನ, ಮತ್ತು ದಕ್ಷಿಣ ಆಫ್ರಿಕಾ ದೇಶಗಳಿಗೆ ಹೊರಡಿರಿ" ಎಂಬುದಾಗಿ ತಿಳಿಸಿದ್ದಾರೆ. ಇದೇಗ ವಿದೇಶಿ ಸರಕುಗಳ ಬಹಿಷ್ಕಾರದ ಪರಿಣಾಮ.

ಚಾರುಶೀಲಾದೇವಿಗೆ ೬ ತಿಂಗಳ ಶಿಕ್ಷೆ.

ಬಂಗಾಲ ಪ್ರಾಂತಕ್ಕೆ ಸೇರಿದ ಮಿದನಾಪುರದ ಶ್ರೀಮತಿ ಚಾರುಶೀಲಾದೇವಿಯರಿಗೆ ಪಿಕೆಟಿಂಗ ಕಾಯದೆಯ ಅನ್ವಯ ೬ ತಿಂಗಳ ಶಿಕ್ಷೆಯಾಗಿದೆ.

ಚಂದ್ರಾಮಣಿದೇವಿಗೆ ೬ ಶಿಕ್ಷೆ.

ಮದ್ರಾಸ ಇಲಾಖೆಗೆ ಸೇರಿದ ಬಡಾವಮುಪ್ಪರದ ಶ್ರೀಮತಿ ಚಂದ್ರಾಮಣಿದೇವಿಗೆ ೧೪೪ ನೆಯ ಕಲಮನ್ನು ಮೀರಿದ್ದಕ್ಕೆ ೬ ತಿಂಗಳ ಸಾದಾ ಶಿಕ್ಷೆಯಾಗಿದೆ.

ಮುದ್ರಣ ಬಕಾಸುರನಿಗೆ

೬೧ ಪತ್ರಿಕೆಗಳು ಬಲಿಯಾದವು.

ವ್ಯಕ್ತಪಕ್ಷ ದಬ್ಬಾಳಿಕೆಯು ಕಾನೂನಿನಸಾರವಾಗಿ ಹಿಂದು ಸ್ಥಾನದಲ್ಲಿ ಎಷ್ಟು ಪತ್ರಿಕೆಗಳಿಗೆ ಅಡವು ಕೇಳಲ್ಪಟ್ಟಿದೆಂಬುದಾಗಿ ಶ್ರೀ. ಮಿತ್ರರವರು ಅಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಒಟ್ಟು ೧೩೧ ಪತ್ರಿಕೆಗಳಿಗೆ ಅಡವು ಕೇಳಲ್ಪಟ್ಟಿದೆಂದೂ, ಅವುಗಳಲ್ಲಿ ೬೧ ಪತ್ರಿಕೆಗಳು ಹೊಣೆಯನ್ನು ಕೊಡದೆ ನಿಂತುಹೋದವೆಂದೂ ಸರ್ಕಾರದಿಂದ ಉತ್ತರ ದೊರೆಯಿತು.

ವಿಜಾಪುರ ಜೇಲಿನಲ್ಲಿ

ಶ್ರೀ. ಸಾಠೆಯವರ ಉಪವಾಸ.

[ಸ್ವಂತ ಸುದ್ದಿಗಾರರಿಂದ]

ಪುಣೆಯ ವಕೀಲರಾದ ಶ್ರೀ ಸಾಠೆಯವರು ಇಂದಿನ ಬಟ್ಟೆಯ ಸಲುವಾಗಿ ಉಪವಾಸ ವ್ರತವನ್ನು ಕೈಕೊಂಡಿದ್ದು ಎಲ್ಲರಿಗೂ ಗೊತ್ತಿರಲಿಕ್ಕೆ ಸಾಕು. ಅವರು ಮೂರ್ಛೆ ಹೊಂದಿಬಿದ್ದಾಗ ಅವರಿಗೆ ಜೇಲಿನ ಬಟ್ಟೆಯನ್ನು ಹಾಕಿದ್ದರು. ಕಲಸ ಕೊಟ್ಟಿನ ಮೇಲೆ ಅವರಿಗೆ ನೆಟ್ಟಗಾಯಿತು ಕೂಡಲೆ ಅವರು ಆ ಬಟ್ಟೆಗಳನ್ನು ಹರಿದುಹಾಕಿದರು ಬತ್ತಲೆಯಾಗಿಯೇ ಇರಹತ್ತಿದ್ದಾರೆ. ಉಪವಾಸ ವ್ರತವೂ ಹಾಗೆಯೇ ಸಾಗಿದೆ. ಈಗ ಅವರಿಗೆ ದಿನಾಲು ಒತ್ತಾಯದಿಂದ ನಳಿಯಿಂದ ಹಾಲುಹಾಕುತ್ತಿರುವರಂತೆ

ಹೊನ್ನುಟಗಿಯಲ್ಲಿ

ಸರ್ಕಲ್ ಇನಸ್ಪೆಕ್ಟರನ ಕಿಡಿಗೇಡಿತನ

(ಸ್ವಂತ ಸುದ್ದಿಗಾರರಿಂದ)

ವಿಜಾಪುರ ಸತ್ಯಾಗ್ರಹ ಶಿಬಿರದಿಂದ ಶ್ರೀ ಕೊರವಿಯವರ ನೇತೃತ್ವದಲ್ಲಿ ೩ ಜನ ಸ್ವಯಂಸೇವಕರು ಪ್ರಚಾರಕಾರ್ಯಕ್ಕಾಗಿ ಹೊನ್ನುಟಗಿ ಎಂಬ ಹಳ್ಳಿಗೆ ಹೋಗಿದ್ದರು. ಅಲ್ಲಿ ಸರ್ಕಲ ಇನಸ್ಪೆಕ್ಟರನು ಆ ಸ್ವಯಂಸೇವಕರನ್ನು ಪೊರಗೆ ಹಾಕಲು ವಾಲೀಕಾರರಿಗೆ ಹೇಳಿದನು. ಆ ವಾಲೀಕಾರನು ಸ್ವಯಂಸೇವಕರ ನೇತೃಗಳಾದ ಶ್ರೀ. ಕೊರವಿಯವರನ್ನು ಹೆಗಲಮೇಲೆ ಹೊತ್ತುಕೊಂಡು ಅಪ್ಪಳಿಸುತ್ತ ಊರಹೊರಗೆ ಒಯ್ದನು. ಮುಂದ ಅವರನ್ನು ಊರು ಬಿಟ್ಟು ೨ ಮೈಲು ದೂರ ಬಿಡಬೇಕೆಂದು ಮುಂದೆ ಹೊಗೆಯೇ ತೆಗೆದುಕೊಂಡು ಹೋದನು. ಇದೆಲ್ಲವನ್ನುಕಂಡು ಆ ಹಳ್ಳಿಯಲ್ಲಿಯ ಜನರು ಸಿಟ್ಟಿಗೆದ್ದು ಆ ವಾಲೀಕಾರನನ್ನು ದಬ್ಬಿ ಸ್ವಯಂಸೇವಕರನ್ನು ಊರಲ್ಲಿ ಕರೆದುಕೊಂಡು ಹೋಗಿ ಸಭೆಮಾಡಿದರು. ಸರ್ಕಲ್ ಇನಸ್ಪೆಕ್ಟರ್ದು ಮಿಕಿ ಮಿಕಿ ನೋಡುತ್ತ ಸುಮ್ಮನೆ ಕುಳಿತಿದ್ದರು.

ದಿಲ್ಲಿಯಲ್ಲಿ ೬೦ ಜನರನ್ನು ಸೆರೆಹಿಡಿದರು

ಹಿಂದು ಬಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ತಾ| ೧೬ ನೆಯ ದಿವಸ ದಿಲ್ಲಿಯಲ್ಲಿ ೬೦ ಜನರು ಸೈದುಮಾತ ಟ್ಟಿದ್ದಾರೆ.

ಬಂಗಾಲದಲ್ಲಿ ಸಿಗರೇಟದ ವಿರುದ್ಧ ಬಂಡು

ಬಂಗಾಲದಲ್ಲಿ ವಿದೇಶಿ ಸರಕುಗಳ ಬಹಿಷ್ಕಾರವು ಬಹಳ ಜೋರಾಗಿ ನಡೆದಿದೆ ಸಿಗರೇಟುಗಳ ವಿರುದ್ಧವಾಗಿ ಚಳವಳಿಯೂ ಅಲ್ಲಿ ಒತ್ತಾಯದಿಂದ ಸಾಗಿದೆ. ಅಲ್ಲಿ ಒಂದು ಯುರೋಪಿಯನ್ ಕಂಪನಿಯವರಿಗೆ ಎಪ್ರಿಲ ತಿಂಗಳದಲ್ಲಿ ಕೇವಲ ಸಿಗರೇಟಗಳಿಂದಲೇ ೧,೨೨,೦೦೦ ರೂ. ಗಳ ಉತ್ಪನ್ನವಾಗಿತ್ತು ಬಹಿಷ್ಕಾರದ ಮೂಲಕವಾಗಿ ಆ ಕಂಪನಿಯವರ ಸಿಗರೇಟುಗಳ ವ್ಯಾಪಾರವು ಮೇ ತಿಂಗಳಲ್ಲಿ ೬೦೦೦ ರೂ ಗಳಿಗೆ ಇಳಿಯಿತು. ಈಗ ಬಂಗಾಲದಲ್ಲಿ ಯುರೋಪಿಯನ್ನರು ಇಷ್ಟೆ ಹಿಂದುಸ್ಥಾನದಲ್ಲಿ ಹುಟ್ಟಿದ್ದು ತಪ್ಪಾಯಿತೆಂದು ತಿಳಿದುಕೊಳ್ಳುವಹಾಗೆ ಯಾವ ಭಾರತೀಯರೂ ಸಿಗರೇಟುಗಳನ್ನು ಮುಟ್ಟುವದಿಲ್ಲ. ಜಟಿಪಿಡ್ಡವರ್ಗದವರೂ ಈಗ ಬೀಡಿಗಳನ್ನೇ ಸೇದುತ್ತಿದ್ದಾರೆ.

ವಕೀಲಿಯನ್ನು ಬಿಟ್ಟರು

ಸರಕಾರದ ದಬ್ಬಾಳಿಕೆಯ ವಿರುದ್ಧಾರ್ಥವಾಗಿ ಆಗ್ರಾದ ಪ್ರಸಿದ್ಧ ವಕೀಲರಾದ ಶ್ರೀ. ಅವಧ ಬಿಹಾರಿಲಾಲ ತಮ್ಮ ವಕೀಲಿಯನ್ನು ಬಿಟ್ಟುಗೊಟ್ಟಿದ್ದಾರೆ ಅವರು ಇನ್ನು ಮುಂದ ವಿದೇಶಿ ಸರಕುಗಳ ಬಹಿಷ್ಕಾರದ ಕಾರ್ಯದಲ್ಲಿ ತೊಡಗಿಸಿಕೊಳ್ಳುವರಿದ್ದಾರೆ.

ಕೈದಿಯು ಮಾಯವಾದನು

ಬಂಗಾಲ ಇಲಾಖೆಗೆ ಸೇರಿದ ಜಾಂಸಾಲದ ಶ್ರೀ ಹುಪಾದ ಸೇನರು ಬಂಗಾಲ ಕಟ್ಟಳೆಯ ಅನುಸಾರವಾಗಿ ಸೆರೆಹಿಡಿಯಲ್ಪಟ್ಟಿದ್ದರು. ಜೇಲಿನಲ್ಲಿರುವಾಗ ಅವರಿಗೆ ತಮ್ಮ ತಾಯಿಯವರಿಗೆ ಅಸ್ವಸ್ಥತೆ ಯುಂಟಾಗಿದ್ದುದು ತಿಳಿದು ಬಂದದ್ದರಿಂದ ಅವರು ಅಧಿಕಾರಿಗಳಿಗೆ ೭ ದಿವಸಗಳ ಬಿಡುವನ್ನು ತೆಗೆದುಕೊಂಡು ತಮ್ಮ ಮನೆಗೆ ಹೋದರು. ೭ ದಿವಸಗಳು ಕಳೆದು ಹೋದವು ಅವರು ಜೇಲಿಗೆ ತಿರುಗಿ ಹೋಗಲಿಲ್ಲ. ಅದನ್ನು ಕಂಡು ಸಬ್ ಇನಸ್ಪೇಕ್ಟರುಗಳು ಅವರ ಮನೆಗೆ ಹೋಗಿ ಮನೆಯನ್ನು ಶೋಧಿಸಿದರು. ಶ್ರೀ ಸೇನರು ಮನೆಯಲ್ಲಿ ಸಿಗಲಿಲ್ಲ ಕಟ್ಟಕಡೆಯಲ್ಲಿ ನಿರಾಶೆ ಹೊಂದಿ ಅಧಿಕಾರಿಗಳು ೨೪ ತಾಸುಗಳಲ್ಲಿ ಅವನನ್ನು ಗೊತ್ತುಹಚ್ಚಿ ಕೊಡದಿದ್ದರೆ ನಿಮ್ಮ ಅವಸ್ಥೆಯು ನೆಲಗಾಗಲಿಕ್ಕಿಲ್ಲವೆನೆದು ಅವರ ಅಣ್ಣಂದಿರನ್ನು ಬೆದರಿಸಿ ಹೋದರು.

ಲೆಫ್ಟೆನೆಂಟರು ರಾಜೀನಾಮೆ ಕೊಟ್ಟರು

ಮಹಾತ್ಮಾ ಗಾಂಧಿಯವರನ್ನು ಸೆರೆ ಹಿಡಿದುದರ ಹಾಗೂ ಸರಕಾರದವರು ಕೈಕೊಂಡ ದಬ್ಬಾಳಿಕೆಯ ನಿಷೇಧವೆಂದು ಮಲಬಾರ ೧೦ ಟೆರಿಟೋರಿಯಲ್ ಫೋರ್ಸ್ ” ನ ಲೆಫ್ಟೆನೆಂಟರಾದ ಶ್ರೀ ಎನ್ ರಾಮನುನಿ ಈರುವರವರು ತಮ್ಮ ಲೆಫ್ಟೆನೆಂಟ ಪದವನ್ನು ಬಿಟ್ಟುಗೊಟ್ಟಿರುವರು.

ಓಂ.

ಶಾಂತಿಸೇನೆಯಲ್ಲಿ ಸೇರಿರಿ!!

ಧಾಟಿ:- "ಕನ್ನಡಕಾಂಬೆ ನಾ ಧ್ಯೇಧ್ಯೆ" ಎಂಬ ರಾಷ್ಟ್ರಗೀತೆಯಂತೆ)

ಏತಕೈ, ಜನ್ಮವಿದು ವ್ಯರ್ಥ, ವ್ಯರ್ಥ,,।
ಮಾತೆಯನ್ನುದ್ಧರಿಸುವವ ಜನ್ಮಸಾರ್ಥ ||ಪ||
ಹಿರಿಯರು ನಾವೆಂಬ ಗರುವದಿಂ ಮೆರೆಯುವಾ,
ಹಿರಿಯತನವೀ ಶಾಂತಿ ಸಮರ ದೊಳಗಿಲ್ಲೇ ||
ವರದ್ರೋಣ ಭೀಷ್ಮಾದಿಗಳತೆರದಿ, ಈ ಧರ್ಮ-।
ಘರದೊಳಗೆ ಧುಮುಕಿರೈ! ಕೂಡ್ರಬೇಡೈ ||||೧||
ತರುಣ ವಿದ್ಯಾರ್ಥಿಗಳೇ, ಏಳಿಸತ್ಕಾರ್ಯಕೆ |
ಪರದಾಯ್ಕ ಪಾಶವನು ಹರಿದೊಗೆಯುವವಕೆ ||
ಶರಣೆನ್ನಿ ಆ ನಿಮ್ಮ ಶಾಲೆ ಕಾಲೇಜಕ್ಕೆ |
ಹಿರಿಯರೇ ಪ್ರೋತ್ಸಾಹ ಕೂಡಿರಿ ನೀವದಕೆ. || ೨ ||
ಕವಿಗಳೇ, ಶೃಂಗಾರ- ಹಾಸ್ಯರಸ ಕೂಡಿದಾ |
ಕವನಕಥೆಗಳ ಬರೆವ ಕಾಲವಲ್ಲಾ ||
ನವಶಕ್ತಿ ಪುಟ್ಟಿಸುವ ಸ್ವಾತಂತ್ರ್ಯ ಕಾಳಗಕೆ |
ಕವನ ಕತೆಗಳಬರೆದು ಜನಗಳಬ್ಬಿಸಿರೈ || ೩ ||
ಆಳರಸ ನಾಕರರೆ, ನಮ್ಮ ಕರ್ಣಾಂಗಳಿಗೆ |
ಕೇಳದೇ "ಸ್ವಾತಂತ್ರ್ಯ ರಣಭೇರಿಯು" |
ಕೀಳು ಜಾಕರಿಗಿಂತ ಸ್ವಾತಂತ್ರ್ಯ ಕೊಳಗುಳದಿ |
ಮೇಲಲ್ಲವೇ "ವೀರಸ್ವರ್ಗ" ಪಡೆಯುವದು || ೪ ||
ಮಾತೆ ಸೇವೆಯಮಾಳ್ಪ ದೇಶಭಕ್ತರ ಹಿಡಿದು |-
ಯಾತನೆಯುಗೊಳಿಸುವವ ಮಾತೃದ್ರೋಹಿ ||
ಮಾತೆಯಲ್ಲವೆ ನಮಗೆ ಭರತಾಂಬೆ ನಾಕರರೆ |
ಮಾತೃ ಮೋಚನಧರ್ಮ ಸುತಧರ್ಮವಲ್ಲೇ. || ೫ ||
ಪ್ರಜರು, ರಕ್ತವಹೀರಿ ಬೆಳೆಯುವ ಜಿಗಳಗಳು |
ಪ್ರಜರ ಹಿತರಾಜರೇ! ಬಗಲ ಗೂಸುಗಳೇ ||
ಸ್ವಜನದ್ರೋಹವಗೈವ ನಮಗಾವ ನರಳವನು |
ಸೃಜಿಸಿಹನು ಜಗದೀಶ ತಿಳಿಯಲಸದಳವೈ || ೬ ||
ಹೆಂಗಳೆಯರಪಮಾನ ಕಂಡುಕರಗದೆ ಹೃದಯ |
ಹೆಂಗಳೆಯ ರೆಮಗಲ್ಲವೇನು ಭಗಿನಿಯರು ||
ಅಂಗನೆಯ ತೆರನಮ್ಮಾ ಭಗಿನಿಯರಪೊರೆ, ಶಾಂತಿ |
ಸಂಗರಕೆ ಮಂಗಳವ ನೀಡು ಶ್ರೀಕೃಷ್ಣ || ೭ ||

ಧಾರವಾಂಬೆ ಬಾಲಕಃ-

ಪೋಲೀಸರು ವಕೀಲರಿಗೆ ಅಪಮಾನ ಮಾಡಿದರು

ವ ಧುರೆಯ ಪ್ರಸಿದ್ಧ ವಕೀಲರಾದ ಶ್ರೀ ಎಸ್. ವೈದ್ಯ ಕಾಥರವರು ಕಾ|| ೧೮ ನೆಯ ದಿವಸ ಸೆಂಟ್ರಲ್ ಪೋಲೀಸ ಸ್ಟೇಶನದ ಮುಂದೆ ಹಾಯ್ದು ಹೋಗುತ್ತಿರುವಾಗ ಅಲ್ಲಿ ನಿಂತುಕೊಂಡ ಓರ್ವ ಪೋಲೀಸನು ಅವರನ್ನು ತಡೆದು ನಿಲ್ಲಿಸಿ, ವೈವೇಲಿನ ಖಾದಿಯ ವಸ್ತ್ರಗಳನ್ನು ಕಸಿದುಕೊಂಡು ಅವರನ್ನು ಅವಮಾನಗೊಳಿಸಿ, ಆ ವಸ್ತ್ರಗಳನ್ನು ತೆಗೆದುಕೊಂಡು ಹೋಗಿ ಚೌಕಿಯ ಮುಂದೆ ಸುಟ್ಟುಬಿಟ್ಟನಂತೆ!

ಇಹವೃತ್ತ

ಶ್ರೀ. ಧನಶೆಟ್ಟಿಯವರೂ, ವೀರಶೈವರ ರಾಜನಿಷ್ಠೆಯೂ

ಕಾ|| ೨೧ ನೆಯ ದಿವಸ ಶಿವಾನಂದ ನಾಟಕ ಗೃಹದಲ್ಲಿ ಇಲ್ಲಿಯ ನಾಗರಿಕರ ಸಭೆಯು ಶ್ರೀ. ಕಿರಸೂರ ವಕೀಲರ ಅಧ್ಯಕ್ಷತೆಯಲ್ಲಿ ಸೇರಿ, ಸೊಲ್ಲಾಪುರದ ಪ್ರತಿಷ್ಠಿತ ನಾಗರಿಕರಾದ ಶ್ರೀ ಮಲ್ಲಪ್ಪ ಧನಶೆಟ್ಟಿಯವರಿಗಾದ ಗಲ್ಲಿನ ಶಿಕ್ಷೆಯನ್ನು ಕಡಿಮೆ ಮಾಡಬೇಕಾಗಿ ನಾ|| ವ್ಹಾಯಿ ಸರಕಾರರು ಹಾಗು ಗವರ್ನರರಿಗೆ ವಿನಂತಿಯನ್ನು ಮಾಡಿಕೊಳ್ಳುವ ಗೊತ್ತು ಸ್ವೀಕೃತವಾಯಿತು. ಶ್ರೀಯುತರುಗಳಾದ ಪಟೇಲ ಮಲ್ಲಿಕಾರ್ಜುನಪ್ಪನವರು ಹಾಗು ದಾಕಾರ ರಾಮರಾಯರು ವೇಲಿನ ಗೊತ್ತಿನ ಸಂಬಂಧವಾಗಿ ಭಾಷಣ ಮಾಡಿದರು.

ನಾಗರಿಕರ ಪರವಾಗಿ ನೆರೆದ ಸಭೆಯ ಕಾರ್ಯವು ತೀರಿದ ಕೂಡಲೆ ಅದೇ ಸ್ಥಳದಲ್ಲಿ ಶ್ರೀ. ಬಣಗಾರ ಬಸಪ್ಪನವರ ಅಧ್ಯಕ್ಷತೆಯಲ್ಲಿ ವೀರಶೈವರ ಸಭೆಯು ಸೇರಿ, ಶ್ರೀ ಧನಶೆಟ್ಟಿಯವರಿಗಾದ ಗಲ್ಲಿನ ಶಿಕ್ಷೆಯನ್ನು ರದ್ದುಮಾಡಬೇಕಾಗಿಯೂ, ಅದು ಸಾಧ್ಯವಿಲ್ಲದಿದ್ದಲ್ಲಿ ಶಿಕ್ಷೆಯನ್ನು ಕಡಿಮೆಯಾದರೂ ಮಾಡಬೇಕಾಗಿಯೂ ನಾ|| ಗವರ್ನರರಿಗೆ ಬೇಡಿಕೊಳ್ಳುವ ಗೊತ್ತು ಸಭೆಯ ಮುಂದೆ ಮಂಡಿಸಲ್ಪಟ್ಟು, ಸರ್ವಾನುಮತದಿಂದ ಸ್ವೀಕೃತವಾಯಿತು. ಶ್ರೀ. ಜಂಗಿನ ಮುರಿಗೆಯ್ಯನವರು ಗೊತ್ತನ್ನು ಸಭೆಯ ಮುಂದೆ ಮಂಡಿಸುವಾಗ "ವೀರಶೈವರು ಈ ವರೆಗೆ ರಾಜನಿಷ್ಠ (?) ರಾಗಿದ್ದುದು ಸರಕಾರದವರಿಗೆ ಗೊತ್ತಿಲಿಕ್ಕೆ ಸಾಕು. ಆದುದರಿಂದ ವೀರಶೈವರ ರಾಜನಿಷ್ಠೆಯ ವರ್ತನದ ಕಡೆಗಾದರೂ ನೋಡಿ ಸರಕಾರದವರು ಶ್ರೀ. ಧನಶೆಟ್ಟಿಯವರಿಗೆ ಕ್ಷಮೆ ಮಾಡಬೇಕು." ಎಂಬ ಅರ್ಥದ ಬಿಳ್ಕೆ ಭಾಷಣವನ್ನು ಮಾಡಿದರು. ಅದಕ್ಕೆ ಶ್ರೀ ಹಾವೇರಿ ಹಾಲಪ್ಪನವರು ಅನುಮೋದನವನ್ನಿತ್ತರು. ಅಲ್ಲಿ ಕೂಡಿದ ವೀರಶೈವರಾಗಲಿ, ನಾಗರಿಕರಾಗಲಿ ತಮ್ಮ ರಾಜನಿಷ್ಠೆಯನ್ನು ವ್ಯಕ್ತಪಡಿಸಿ ಬೇಡಿಕೊಳ್ಳಲು ಹೋಗಿದ್ದಿಲ್ಲವಾಗಿಯೂ, ಹಿಂದೂ ಸಮಾಜದ ಮುಖಂಡರಾದ ಶ್ರೀ ಧನಶೆಟ್ಟಿಯವರ ಸಲುವಾಗಿ ಮಾಡಬೇಕಾಗಿದ್ದ ಕರ್ತವ್ಯವನ್ನು ನೆರವೇರಿಸಲು ಹೋಗಿದ್ದರಾಗಿಯೂ ನಮಗೆ ಎನಿಸುತ್ತದೆ. ಅಹುದಾದರಹುದೆನ್ನಿ; ಅಲ್ಲವಾದರಲ್ಲವೆನ್ನಿ.

ದಿಲ್ಲಿಯಲ್ಲಿ ೬೦ ಜನರನ್ನು ಸೆರೆಹಿಡಿದರು.

ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದುದಕ್ಕಾಗಿ ಕಾ|| ೧೬ ನೆಯ ದಿವಸ ದಿಲ್ಲಿಯಲ್ಲಿ ೬೦ ಜನರು ಕೈದುಮಾಡಲ್ಪಟ್ಟಿದ್ದಾರೆ.

ಬಂಡೀಗಾಲಿಯ ಪರಿಷತ್ತಿನಲ್ಲಿ ಬ್ರಿಟಿಶರ ಪ್ರತಿನಿಧಿಗಳು

ಲಂಡನ್ನದಲ್ಲಿ ಕೂಡಲಿಕ್ಕಿದ ಬಂಡೀಗಾಲಿಯ ಪರಿಷತ್ತಿಗೆ ಬ್ರಿಟಿಶರ ಪ್ರತಿನಿಧಿಗಳಾಗಿ ೩ ಜನರು ಅಲ್ಲಿ ಭಾಗಿಗಳಾಗುವರೆಂದೂ, ಅವರಲ್ಲಿ ಮಿ|| ಮ್ಯಾಕಡೊನಾಲ್ಡ ಹಾಗು ಬಾಲ್ಡವಿನ್ನರು ಅಧ್ಯಕ್ಷರಾಗುವರೆಂದೂ, ಮಿ|| ರೀಡಿಂಗ ಮತ್ತು ಚೆಂಬರ್ಲೇನರು ಸಭಾಸದರಾಗುವರೆಂದೂ ತಿಳಿಯುತ್ತದೆ.

ಬೆಳಗಾವಿಯಲ್ಲಿ ಅಪೂರ್ವ ಉತ್ಸಾಹ

ಪಿಕೆಟಿಂಗಕ್ಕಾಗಿ ೧೭ ಜನರಿಗೆ ಶಿಕ್ಷೆ. 'ಬಹಿಷ್ಕಾರ ವಾರ'ದ ಪ್ರಾರಂಭ

ಸೆರೆ ಸಿಂದಿ ಅಂಗಡಿಗಳ ಮುಂದೆ ನಿಂತುಕೊಂಡು ಕುಡುಕರನ್ನು ಸುರಪಾನದಿಂದ ಬಿಡಿಸಲು ಪ್ರಯತ್ನ ಮಾಡಿದುದಕ್ಕಾಗಿ ಬೆಳಗಾವಿಯ ಶ್ರೀ ಕಕ್ಕಾರೆ ಗೋವಿಂದಭಟ್ಟ, ಅಂಗಡಿ, ಗಲಗಲಿ, ದೇಶಪಾಂಡೆ, ಅನಂತ, ಬಾಳೇಕುಂದ್ರಿ, ಗೋಡಸೆ, ದೇಶಪಾಂಡೆ, ಘೇವಾರಿ, ವೇಣೇಕರ, ಬಾಗಿ ಮತ್ತು ಜೋಗಿ ಇವರುಗಳಿಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ. ಶ್ರೀ. ದೇಶಪಾಂಡೆ ಮತ್ತು ಘೇವಾರಿಯವರಿಗೆ ಸಾಯಮನ್ ಪ್ರತಿಮೆಯನ್ನು ಹುಟ್ಟಿದುದಕ್ಕಾಗಿ ೧೫ ದಿವಸಗಳ ಹೆಚ್ಚಿನ ಶಿಕ್ಷೆಯಾಗಿದೆ. ಕಿಲ್ಲೆದಲ್ಲಿಯ ಸರಕಾರಿ ಸಿಂದೀ ಗಿಡವನ್ನು ಸಂಹಾರ ಮಾಡಿದ್ದಕ್ಕಾಗಿ ಶ್ರೀ. ಕಾಕಡೆ, ವಾಳವೇಕರ, ಶಂಕರಸಾ, ಶ್ರೀನಿವಾಸ ಕುಲಕರ್ಣಿ ಈ ನಾಲ್ವರು ೨ ತಿಂಗಳ ಸಶ್ರಮ ಶಿಕ್ಷೆಗುರಿಯಾದರು. ಕೊಳಟನೂರದ ಶ್ರೀ ಮಹಾದೇವ ಜೋತಿಯವರಿಗೆ ೧೫ ದಿವಸಗಳ ವರೆಗೆ ಹುಂಗವಾಯಿತು.

ಬ್ರಿಟಿಶ ಒಟ್ಟಿಗಳ ಬಹಿಷ್ಕಾರ ಕಾರ್ಯದಲ್ಲಿ ತಮ್ಮಿಂದ ಕಿಂಚಿದ್ದಷ್ಟು ಸಹಾಯ ಮಾಡಬೇಕೆಂಬ ಉದ್ದೇಶದಿಂದ ಬಹುಸರವಾಗಿ ಬೆಳಗಾವಿಯ ಎಲ್ಲ ವಕೀಲರೂ ರಾಟೆಯ ಮೇಲೆ ಸೂಲುತ್ತಿರುವರು. ಅವರು ಕೋರ್ಟಿನಲ್ಲಿಯ ವಕೀಲರ ಕೋಣೆಯಲ್ಲಿಯಾದರೂ ರಾಟೆಗಳನ್ನಿಟ್ಟುಕೊಂಡಿದ್ದು ಪ್ರತಿನಿತ್ಯದಲ್ಲಿ ೨೦೦ ಯಾರ್ಡ ನೂಲು ತೆಗೆಯುತ್ತಿರುವರು. ಮತ್ತು ಅದನ್ನು ಪುಕ್ಕಟೆಯಾಗಿ ಕಾಂಗ್ರೆಸ್ ಖಾದಿ ಭಾಂಡಾರದವರಿಗೆ ಕೊಡುತ್ತಿರುವರು. "ಬಹಿಷ್ಕಾರ ಸಪ್ತಾಹ"ವು ಸೋಮವಾರದಿಂದ ಪ್ರಾರಂಭವಾಗಿರುವದು.

ನಿಪ್ಪಾಣಿಯ ನಗರಸಭೆಯವರೂ

ನಾಡಗುಡಿಯನ್ನು ನಿಲ್ಲಿಸಿದರು

ಬೆಳಗಾವಿಯ ನಗರ ಸಭೆಯವರು ತಮ್ಮ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಿಕೊಂಡಿದ್ದುದನ್ನು ನೋಡಿ ನಿಪ್ಪಾಣಿಯ ನಗರಸಭೆಯವರೂ ಸಭೆ ಕೂಡಿಸಿಕೊಂಡು, ಸಭೆಯಲ್ಲಿ ನಾಡಗುಡಿಯನ್ನು ನಿಲ್ಲಿಸಕೂಡದೆಂಬುದಾಗಿ ನಿರ್ಧರಿಸಿಕೊಂಡರು. ತಾ|| ೧೮ ನೆಯ ದಿವಸ ನಗರ ಸಭೆಯ ಕಟ್ಟಡದ ಮೇಲೆಯೂ ತಮ್ಮ ಒಡೆತನದವುಗಳಾದ ಚಾಟ ಮಾರ್ಕೆಟ್ ಹಾಗು ಮ್ಯುನಿಸಿಪಲ್ ವಾಚನಾಲಯಗಳ ಮೇಲೆಯೂ ರಾಷ್ಟ್ರಧ್ವಜಗಳನ್ನು ಹಿಳ್ಳಿಸಿದರು. ಇದರೊಂದಿಗೆ ಮುಂಬಯಿ ಕರ್ನಾಟಕದಲ್ಲಿ ಒಟ್ಟಿಗೆ ಬೆಳಗಾವಿ ಜಿಲ್ಲೆಯಲ್ಲಿ ೩, ಧಾರವಾಡ ಜಿಲ್ಲೆಯಲ್ಲಿ ೨, ಕಾರವಾರ ಜಿಲ್ಲೆಯಲ್ಲಿ ೧, ವಿಜಾಪುರ ಜಿಲ್ಲೆಯಲ್ಲಿ ೦, ಹೀಗೆ ೬ ನಗರಸಭೆಗಳ ಮೇಲೆ ರಾಷ್ಟ್ರಧ್ವಜಗಳು ನಿಂತಂತಾದವು. ವಿಜಾಪುರ ಹಾಗು ಬಾಗಲಕೋಟೆಯವರೇ, ನೀವು ಈ ಕಲಂಕವನ್ನು ಅಳಿಸಿಕೊಳ್ಳುವಿರಾ?

ಇಳಕಲ್ಲಿನಲ್ಲಿ

ಸಿಂದೀ ಗಿಡಗಳ ಸಂಹಾರ

ತಾ|| ೨೦ ನೆಯ ದಿವಸ ಹುನಗುಂದದ ಲೋಕಮಾನ್ಯ ಪಥಕದ ಸತ್ಯಾಗ್ರಹಿಗಳು ಶ್ರೀ. ತವನಾಚಾರ್ಯ ಕಟ್ಟಿಯವರ ನೇತೃತ್ವದಲ್ಲಿ ಸಿಂದೀ ಗಿಡಗಳ ಸಂಹಾರಕ್ಕಾಗಿ ಇಳಕಲ್ಲಿಗೆ ಹೊರಟ್ಟು ಹೋದರು. ಅಂದು ನಾಗರಿಕರು ಪ್ರಚಂಡವಾದ ಮೆರವಣಿಗೆಯನ್ನು ತೆಗೆದು ಸತ್ಯಾಗ್ರಹಿಗಳನ್ನು ಅರತಿ ಅಕ್ಷತೆಗಳಿಂದ ಸತ್ಕರಿಸಿ, ಅವರನ್ನು ಕಳಿಸಿಕೊಟ್ಟರು. ಅವರು ಇಳಕಲ್ಲಿಗೆ ಮುಟ್ಟಿದಕೂಡಲೆ ಅಲ್ಲಿಯ ಜನರು ಅವರನ್ನು ಸತ್ಕರಿಸಿ ಕರೆದುಕೊಂಡು ಹೋದರು. ಸತ್ಯಾಗ್ರಹಿಗಳು ತಾ|| ೨೧ ನೆಯ ದಿವಸ ಸಿಂದೀ ಒಣಕ್ಕೆ ಕೊಡಿ ಅಲ್ಲಿ ಈಚಲ ಗಿಡಗಳನ್ನು ನೇಲ್ಕುರುಳಿಸಿ ಬಂದರು.

ಸತ್ಯಾಗ್ರಹಕ್ಕಾಗಿ ತಂದೆ ಮಕ್ಕಳಲ್ಲಿ ತಂಟೆ

ಶ್ರೀಜನಾಪಳ್ಳಿಯಲ್ಲಿ ಶ್ರೀ ರಘುನಾಥರಾಯ ಡಿಂಬೋರ್ವಸಿ ಮ್ಯಾಜಿಸ್ಟ್ರೇಟರಿರುವರು. ಅವರಿಗೆ ರಾಮಚಂದ್ರರಾಯ ನೆಂಬೊಬ್ಬ ಮಗ. ಅವನು ಅಲ್ಲಿಯ ಸತ್ಯಾಗ್ರಹಿ ಕೂಡದ ಮುಖಂಡ. ಅವನಿಗೆ ಜೂನ ತಿಂಗಳದಲ್ಲಿ ೬ ತಿಂಗಳ ಕಠಿಣ ಶಿಕ್ಷೆಯಾಯಿತು. ರಘುನಾಥರಾಯರು ಮಗನಿಗಾದ ಶಿಕ್ಷೆಯ ವಿರುದ್ಧ ಮೇಲಿನ ಕೋರ್ಟಿಗೆ ಅಪೀಲು ಮಾಡಿದರು. ಅಲ್ಲಿ ವಿಚಾರಣೆಯು ನಡಿಯಿತು. ವಿಚಾರಣೆಯಕಾಲಕ್ಕೆ ಸತ್ಯಾಗ್ರಹಿಗಳಾದ ರಾಮಚಂದ್ರರಾಯರೇನು ಕ್ಷಮೆಯನ್ನು ಬೇಡಿಕೊಳ್ಳಲಿಲ್ಲ. ತಮ್ಮ ತಂದೆಯವರಿಗೆ ಸರಕಾರಿ ಉದ್ಯೋಗವನ್ನು ಬಿಟ್ಟುಬಿಡಲಿಕ್ಕೂ ಹಾಗು ಕಾಂಗ್ರೆಸದ ಕಾರ್ಯಕ್ರಮಗಳನ್ನು ಜರುಗಿಸಿ ಸೆರೆಮನೆಗೆ ತೆರಳಲಿಕ್ಕೂ ಉಪದೇಶಮಾಡಿದರು. ರಘುನಾಥರಾಯರು ಕೋರ್ಟ ಬಿಟ್ಟು ಎದ್ದುಹೋದರು. ನ್ಯಾಯಾಧೀಶರು ಮೊದಲಿನ ಶಿಕ್ಷೆಯನ್ನೇ ಸ್ಥಿರಮಾಡಿದರು.

ಸರ್. ಸಿ. ಪಿ. ರಾಮಸ್ವಾಮಿಯವರು

ಮಹಾತ್ಮರನ್ನು ಭೆಟ್ಟಿಯಾದರು.

ಸಿಮಲಾದಲ್ಲಿಯ ಅಸೆಂಬ್ಲಿಯ ಕಾರ್ಯವನ್ನು ಮುಗಿಸಿಕೊಂಡು ಮದ್ರಾಸಕ್ಕೆ ತೆರಳುವಾಗ ಸರ್. ಸಿ. ಪಿ ರಾಮಸ್ವಾಮಿ ಅಯ್ಯರವರು ಹಾದಿಯಲ್ಲಿ ಪುಣೆಯಲ್ಲಿ ಇಳಿದು, ಮಹಾತ್ಮಾ ಗಾಂಧಿ ಹಾಗು ಶ್ರೀಮತಿ ಸರೋಜಿನಿ ದೇವಿಯವರನ್ನು ಯರವಡಾ ಜೇಲಿನಲ್ಲಿ ಕಂಡುಕೊಂಡು, ಅವರೊಡನೆ ಸದ್ಯದ ರಾಜಕೀಯ ಪರಿಸ್ಥಿತಿ ಹಾಗು ಒಂದೀಗಾಲಿಯ ಪರಿಷತ್ತಿನ ವಿಷಯವಾಗಿ ಚರ್ಚಿಸಿದರೆಂದು ತಿಳಿದು ಬಂದಿತ್ತು.

ಸತ್ಯಾಗ್ರಹಿಗಳಿಗೆ ಪುಕ್ಕಟೆ ಕಷ್ಟ

ದಿಲ್ಲಿಯಲ್ಲಿ ೩೦೦ ಜನ ನಾವಲಿಗರು ತಮ್ಮದೊಂದು ಸಭೆ ಮುನ್ನೇರ್ಪಡಿಸಿಕೊಂಡು ಸತ್ಯಾಗ್ರಹಿಗಳಿಗೆ ಪುಕ್ಕಟೆಯಾಗಿ ಕಷ್ಟ ಮಾಡಬೇಕೆಂದಾಗಿ ನಿರ್ಧರಿಸಿಕೊಂಡಿದ್ದಾರೆ

ಮಾರಾಟಕ್ಕೆ! ಮಾರಾಟಕ್ಕೆ!!

ಕನ್ನಡಿಗನ ಕಾರ್ಯಾಲಯದಲ್ಲಿ

ಕನ್ನಡ ನಾಡಿನ ಸುಪ್ರಸಿದ್ಧ

ಗ್ರಂಥಗಳು.

ಕರ್ನಾಟಕ ಶಿಕ್ಷಣ ಸಮಿತಿ ಧಾರವಾಡ.

ಸೆಹರು ಕಮೀಟಿಯ ವರದಿಯ ಕನ್ನಡ ಭಾಷಾಂತರವು ೧-೦-೦

UNITED KARNATAK
A CALL TO KARNATAK UNIFICATION ೧—೮—೦

ರಾಷ್ಟ್ರಸಭೆಯ (ಕಾಂಗ್ರೆಸ್ಸದ) ಇತಿಹಾಸ. ೨-೮-೦
(ಪೃ ಸಂಖ್ಯೆ ೪೫೬)
ಭಾರತೀಯರ ಇತಿಹಾಸ (ಪುಟಸಂಖ್ಯೆ ೩೩೩) ೨-೮-೦
ಭರತಖಂಡದ ಜೀವ-ಜ್ಯೋತಿಗಳು. ೧-೮-೦

ಭರತಖಂಡದ ರಾಷ್ಟ್ರ ಹಾಗೂ ಧರ್ಮಪುರುಷರ ಚರಿತ್ರೆ (ಪುಟ ೨೩೭)

ಆರ್ಯ ಧರ್ಮ-ಪ್ರದೀಪ (ಪುಟ ಸಂಖ್ಯೆ ೫೭೦) ೩-೦-೦
ಕರ್ನಾಟಕ ಗತವೈಭವ ೧-೪-೦
ಭಾವಗೀತೆ. ೧-೦-೦

ಅಧ್ಯಾತ್ಮ ಕಾರ್ಯಾಲಯ ಧಾರವಾಡ.

ಉಪನಿಷತ್ ಪ್ರಕಾಶ ಭಾಗ ೧ ೦-೧೨-೦
,, ,, ಭಾಗ ೨ ೦-೧೨-೦
ಉಪನಿಷತ್ ರಹಸ್ಯವು ಅಥವಾ ಭಾರತೀಯ ಅಧ್ಯಾತ್ಮ ಶಾಸ್ತ್ರದ ಪೀಠಿಕೆಯು.

ಪ್ರೊ. ರಾ. ದ. ರಾನಡೇಯವರ (A constructive Survey of Upanishadic Philosophy) ಎಂಬ ಗ್ರಂಥದ ಕನ್ನಡ ಅನುವಾದವು.

ಅನುವಾದಕರು:—
ರಂಗನಾಥ ರಾಮಚಂದ್ರ ದಿವಾಕರ ಎಂ. ಎ ಎಲ್. ಎಲ್. ಬಿ.
ದತ್ತಾತ್ರೆಯ ರಾಮಚಂದ್ರ ಬೇಂದ್ರೆ ಬಿ. ಎ.
ಶಂಕರ ಬಾಳಕೃಷ್ಣ ಜೋಶಿ ಗ್ರಂಥಕರ್ತರು.
(ಪುಟ ಸಂಖ್ಯೆ ೪೦೯) ೩-೦-೦
ಬೇನಿಗರ ಲಘು ಚಿಂತಾಮಣಿ ೦-೧೨-೦

ಕರ್ಮವೀರ ಕಾರ್ಯಾಲಯ ಧಾರವಾಡ

ಪ್ರಸನ್ನ ವೆಂಕಟರ ಜಾಗೆವತ ೧-೦-೦
,, ,, ಕೀರ್ತನೆ. ೦-೮-೦
ಕೀಚಕವಧೆ ೦-೪-೦
ಗೀತೆಯ ಗುಟ್ಟು ೧-೦-೦
ಜಗದೀಶ ಚಂದ್ರಬೋಸರ ಚರಿತ್ರೆ. ೦-೪-೦
ಸತ್ಯಜಯ ೦-೨-೦
ಗ್ರಾಮೀಣಗೀತಂ ೦-೧-೦

ಗಳಗನಾಥರ ಗ್ರಂಥಗಳು.

ರಾಣಿಮೃಣಾಲಿನಿ ೧-೮-೦
ರಾಣಾರಾಜಸಿಂಹ ೦-೧೨-೦
ಕ್ಷಾತ್ರತೇಜ ೧-೦-೦
ಧಾರ್ಮಿಕ ತೇಜ ೧-೮-೦
ಸದ್ಗುರುಪ್ರಭಾವ ೦-೧೪-೦

ಡಿ. ವಿ. ಗುಂಡಪ್ಪನವರಿಂದ ವಿರಚಿತವಾದ ಪುಸ್ತಕಗಳು!

ವಿದ್ಯಾರಣ್ಯ ವಿಜಯ ೨-೦-೦
ರಂಗಾಚಾರ್ಲು ೨-೦-೦
ಗೋಖಲೆ ೧-೮-೦
ತ್ರಿವೃತ್ತಕಗಳು ೦-೧೪-

ಸಾಹಿತ್ಯ ಪುತ್ರ ಜನಜೀವನ ೦-೬-೨
ಕನಕಾಲುಕಾ ೦-೪-೨
ಇಂದ್ರವಜ್ರ ೦-೬-೦
ಶ್ರೀ ವಿದ್ಯಾರಣ್ಯ ಸ್ತುತಿ ೦-೧-೦

संयुक्त कर्नाटक अथवा विभागलेल्या कर्नाटकाचें एकीकरण. ೦-೨-೦
कानडी मराठी वादाचें खरें स्वरूप. ೦-೨-೦

ಬಲಿದಾನ ೦-೪-೦
ನಾರದ ಮುನಿಯ ಜನ್ಮ ೦-೦-೬
ವಿಷ್ಣುಸರು ಮೀಮಾಂಶೆ
(ಸಾಕಾತ್ ಪಶುವಧ ಖಂಡನ) ೦-೧-೬

ಕರ್ನಾಟಕ ನಂದಿನೀ ಗ್ರಂಥಮಾಲೆಗಳು.

ಶ್ರೀಲಕ್ಷ್ಮೀನೃಸಿಂಹ ಸ್ತೋತ್ರ ೦-೧೦-೦
ವಿಮಲಾದೇವಿ ೧-೧೨-
ಶ್ರೀರಾಮ ನಂದನಾ ವಂದಂ ೦-೬-
ದ್ರೌಪದೀ ವಸ್ತ್ರಾಪಹರಣ ೦-೨-೦
ಸುಮುಖೀ ವಿಜಯಂ ೦-೬-
ಕಾಳಗೌಡ ೦-೧-
ರಘುನಾಥ ಸಿಂಹ ೧-೮-

ಸನ್ಮಾರ್ಗದರ್ಶಿ ಗ್ರಂಥಮಾಲೆಗಳು.

ವಿದ್ಯಾ ವಿಚಾರ ೦-೧-
ಭಿಜ್ಞಾನ ಚಂದ್ರಹಾಸ ೦-೪-
ವಿಚ್ಛರಿತ ಸುದಾಮದೇವ ೦-
ವಿದ್ಯಾರ್ಥಿಗಳ ಕರ್ತವ್ಯ ೦-೧-
ಚಲುವನ ಕನಸು ೦-೦-
ಶ್ರೀನಿವಾಸ ಸಂಕೀರ್ತನ ೦-
ಬಾಲಚರಿತ ೦-
ಭರ್ತೃಹರಿ ನಿರ್ವೇದ (ನಾಟಕ) ೦-
ಗಿರಿಜಾಬಾಯಿ ೦-
ಸೂಕ್ಷ್ಮಾಯುರ್ವೇದ ಚಿಕಿತ್ಸಾ ಪ್ರಯೋಗ ೦-
ಪುರಂದರದಾಸರ ಚರಿತ್ರೆ ೦-
ಪೃತಗಳು (ಭಾಗ ೧) ೦-
ಸನ್ಮಾರ್ಗದರ್ಶಿ ಸಂಪುಟ ೧ ೦-

ಸನ್ಮಾನ ಗ್ರಂಥಾವಳಿಗಳು.

ತಪತೀ ಕಲ್ಯಾಣಂ ೦-
ಪ್ರಜ್ಞಾಸ್ವಯಂವರಂ ೦-
ಗುರು ದತ್ತರಾಯನ ಚರಿತ್ರೆ (ನಾಟಕ) ೦-೧೦-
ಗಿರಿಮಲ್ಲಿಕಾರ್ಜುನಶತಕಂ ೦-
ನಿಶಾಕಾಂತ ೦-
ಭಾರ್ಗವ ಗರ್ವಭಂಗಂ ೦-

ಸತೀಹಿತೈಷಿಣಿ ಗ್ರಂಥಮಾಲೆಗಳ

ರಮಾನಂದ ೦-
ಭದ್ರಗೀತಾವಳಿ ೦-
ನಳ (ಭಾಗ ೧) ೦-
ಕರ್ನಾಟಕ ಮಾತೃನಂದಿನೀ ೧-
ವಿದ್ಯುಲ್ಲತಾ (ಹರಿಣಿ ಭಾ ೧) ೧-
ಕರ್ನಾಟಕ ಮಾತೃನಂದಿನೀ ೧-
ವಿಶ್ರಮ ೧-
ಪೂರ್ಣಶಲಾ ೧-
ಹೊರಡುವದು! ಹೊರಡುವದು!

ಮ॥ ರಾ॥ ಶ್ರೀನಿವಾಸ ರವರವು.

ಸಾಹಿತ್ಯ ೧-
ವಿಮರ್ಶೆ ೧-
ಅರುಣ ೦-
ಚಿನ್ನಹ ೦-
ಶಾಂತಾ ೦-
ಸಾವಿತ್ರಿ ೦-

ವ್ಯವಸ್ಥಾಪಕ— ' ಕನ್ನಡಿಗ ' ಬಾಗಲಕೋಟೆ.

ಮಾರಾಟಕ್ಕೆ! ಮಾರಾಟಕ್ಕೆ!!

ಕನ್ನಡಿಗನ ಕಾರ್ಯಾಲಯದಲ್ಲಿ

ಕನ್ನಡ ನಾಡಿನ ಸುಪ್ರಸಿದ್ಧ

ಗ್ರಂಥಗಳು.

ಕರ್ನಾಟಕ ಶಿಕ್ಷಣ ಸಮಿತಿ ಧಾರವಾಡ,

ನೆಹರು ಕಮೀಟಿಯ ವರದಿಯ ಕನ್ನಡ ಭಾಷಾಂತರವು ೧-೦-೦

UNITED *KARNATAK*
A CASE TO KARNATAK UNIFICATION ೧—೮—೦

ರಾಷ್ಟ್ರಸಭೆಯ (ಕಾಂಗ್ರೆಸ್ಸದ) ಇತಿಹಾಸ. ೨-೮-೦
(ಪುಟ ಸಂಖ್ಯೆ ೪೫೬)
ಭಾರತೀಯರ ಇತಿಹಾಸ (ಪುಟಸಂಖ್ಯೆ ೩೩೩) ೨-೮-೦
ಭರತಖಂಡದ ಜೀವ-ಜ್ಯೋತಿಗಳು. ೧-೮-೦
ಭರತಖಂಡದ ರಾಷ್ಟ್ರ ಹಾಗೂ ಧರ್ಮಪುರುಷರ ಚರಿತ್ರೆ (ಪುಟ ೨೫೭)
ಆರ್ಯ ಧರ್ಮ-ಪ್ರದೀಪ (ಪುಟ ಸಂಖ್ಯೆ ೫೭೦) ೩-೦-೦
ಕರ್ನಾಟಕ ಗತವೈಭವ ೧-೪-೦
ಭಾವಗೀತೆ. ೧-೦-೦

ಅಧ್ಯಾತ್ಮ ಕಾರ್ಯಾಲಯ ಧಾರವಾಡ.

ಉಪನಿಷತ್ ಪ್ರಕಾಶ ಭಾಗ ೧ ೦-೧೨-೦
" " ಭಾಗ ೨ ೦-೧೨-೦
ಉಪನಿಷತ್ ರಹಸ್ಯವು ಅಥವಾ ಭಾರತೀಯ ಅಧ್ಯಾತ್ಮ ಶಾಸ್ತ್ರದ ಪೀಠಿಕೆಯು.
ಪ್ರೊ. ರಾ. ದ. ರಾನಡೇಯವರ (A constructive Survey of Upanishadic Philosophy) ಎಂಬ ಗ್ರಂಥದ ಕನ್ನಡ ಅನುವಾದವು.
ಅನುವಾದಕರು:-
ರಂಗನಾಥ ರಾಮಚಂದ್ರ ದಿವಾಕರ ಎಂ. ಎ ಎಲ್. ಎಲ್. ಬಿ.
ದತ್ತಾತ್ರಯ ರಾಮಚಂದ್ರ ಬೇಂದ್ರೆ ಬಿ. ಎ.
ಶಂಕರ ಬಾಳಕೃಷ್ಣ ಜೋಶಿ ಗ್ರಂಥಕರ್ತರು.
(ಪುಟ ಸಂಖ್ಯೆ ೪೦೯) ೩-೦-೦
ಬೇನಿಗರ ಲಘು ಚಿಂತಾಮಣಿ ೦-೧೨-೦

ಕರ್ಮವೀರ ಕಾರ್ಯಾಲಯ ಧಾರವಾಡ

ಪ್ರಸನ್ನ ವೆಂಕಟರ ಬಾಗೆವತ ೧-೦-೦
" " ಕೀರ್ತನೆ. ೦-೮-೦
ಕೀಚಕವಧೆ ೦-೪-೦
ಗೀತೆಯ ಗುಟ್ಟು ೧-೦-೦
ಜಗದೀಶ ಚಂದ್ರಘೋಸರ ಚರಿತ್ರೆ. ೦-೪-೦
ಸ್ವಾತ್ಮಚರ್ಯ ೦-೨-೦
ಭಾವಸೀಗೀತಂ ೦-೧-೦

ಗಳಗನಾಥರ ಗ್ರಂಥಗಳು.

ರಾಣಿಮೃಣಾಲಿನಿ ೩-೪-೦
ರಾಣಾರಾಜಸಿಂಹ ೦-೧೨-೦
ಕ್ಷಾತ್ರತೇಜ ೧-೦-೦
ಧಾರ್ಮಿಕ ತೇಜ ೧-೮-೦
ಸುದ್ಗುರುಪ್ರಭಾವ ೦-೧೨-೦

ಡಿ. ವಿ. ಗುಂಡಪ್ಪನವರಿಂದ ವಿರಚಿತವಾದ ಪುಸ್ತಕಗಳು!

ವಿದ್ಯಾರಣ್ಯ ವಿಜಯ ೨-೦-೦
ರಂಗಾಚಾರ್ಲು ೨-೦-೦
ಗೋಖಲೆ ೧-೮-೦
ಕಿರಿವೃತ್ತಕಗಳು ೦-೧೨-
ಸಾಹಿತ್ಯ ಮತ್ತು ಜನಜೀವನ ೦-೬-೨
ಕನಕಾಲುಕಾ ೦-೪-೨
ಇಂದ್ರವಜ್ರ ೦-೩-೦
ಶ್ರೀ ವಿದ್ಯಾರಣ್ಯ ಸ್ತುತಿ ೦-೧-೦

ಸಂಯುಕ್ತ ಕರ್ನಾಟಕ ಅಥವಾ ವಿಭಾಗಲೇಖ್ಯಾ ಕರ್ನಾಟಕಾಚೆ ಏಕೀಕರಣ. ೦-೨-೦
ಕಾನಡಿ ಮರಾಠಿ ವಾದಾಚೆ ಖರೆ ಸ್ವರೂಪ. ೦-೨-೦
ಬಲಿದಾನ ೦-೪-೦
ನಾರದ ಮುನಿಯ ಜನ್ಮ ೦-೦-೬
ವಿಷ್ಣುಪರು ಮೀಮಾಂಸೆ
(ಸಾಕಾರ ಪಶುವಧ ಖಂಡನ) ೦-೧-೬

ಕರ್ನಾಟಕ ನಂದಿನೀ ಗ್ರಂಥಮಾಲೆಗಳು.

ಶ್ರೀಲಕ್ಷ್ಮೀನೃಸಿಂಹ ಸ್ತೋತ್ರ ೦-೧೦-೦
ವಿಮಲಾದೇವಿ ೧-೧೨-೦
ಶ್ರೀರಾಮ ನಂದನಾ ವಂದಂ ೦-೬-೦
ದ್ರೌಪದೀ ವಸ್ತ್ರಾಪಹರಣ ೦-೨-೦
ಸುಮುಖೀ ವಿಜಯಂ ೦-೬-೦
ಕಾಳಗೌಡ ೦-೧-೦
ರಘುನಾಥ ಸಿಂಹ ೧-೮-೦

ಸನ್ಮಾರ್ಗದರ್ಶಿ ಗ್ರಂಥಮಾಲೆಗಳು. ೦

ವಿದ್ಯಾ ವಿಚಾರ ೦-೧-೦
ಭಿಜ್ಞಾನ ಚಂದ್ರಹಾಸ ೦-೪-೦
ವಿಚ್ಛೇದಿತ ಸುದಾಮದೇವ ೦-೪-
ವಿದ್ಯಾರ್ಥಿಗಳ ಕರ್ತವ್ಯ ೦-೧-೬
ಚಲುವನ ಕನಸು ೦-೦-೬
ಶ್ರೀನಿವಾಸ ಸಂಕೀರ್ತನ ೦-೬-೦
ಬಾಲಚರಿತ ೦-೮-೦
ಭರ್ತೃಹರಿ ನಿರ್ವೇದ (ನಾಟಕ) ೦-೬-೦
ಗಿರಿಜಾಬಾಯಿ ೦-೮-೦
ಸೂಕ್ಷ್ಮಾಯುರ್ವೇದ ಚಿಕಿತ್ಸಾ ಪ್ರಯೋಗ ೦-೬-೦
ಪುರಂದರದಾಸರ ಚರಿತ್ರೆ ೦-೬-೦
ವೃತಗಳು (ಭಾಗ ೧) ೦-೬-೦
ಸನ್ಮಾರ್ಗದರ್ಶಿ ಸಂಪುಟ ೧ ೦-೦-೦

ಸನ್ಮಾನ ಗ್ರಂಥಾವಳಿಗಳು.

ತಪತೀ ಕಲ್ಯಾಣಂ ೦-೮-೦
ಪ್ರಜ್ಞಾಸ್ವಯಂವರಂ ೦-೮-೦
ಗುರು ದತ್ತರಾಯನ ಚರಿತ್ರೆ (ನಾಟಕ) ೧-೧೦-
ಗಿರಿಮಲ್ಲಿಕಾರ್ಜುನಶರತಕಂ ೦-೮-೦
ಶಿಶುಕಾಂತ ೦-೪-೦
ಭಾರ್ಗವ ಗರ್ವಭಂಗಂ ೦-೧-೦

ಸತೀಶಿತೈಷಿಣಿ ಗ್ರಂಥಮಾಲೆಗಳ -

ರಮಾನಂದ ೦-೧೦-
ಭದ್ರಗೀತಾವಳಿ ೦-೪-೦
ನಘಾ (ಭಾಗ ೧) ೦ ೧೦-
ಕರ್ನಾಟಕ ಮಾತೃನಂದಿನೀ ೧-೪-
ವಿದ್ಯುಲ್ಲತಾ (ಹರಿಣಿಭಾ ೧) ೧-೦-೦
ಕರ್ನಾಟಕ ಮಾತೃನಂದಿನೀ ೧-೪-
ವಿಕ್ರಮ ೧-೪-
ಪೂರ್ಣಕಲಾ ೧-೪-
ಪೊರಡುವದು! ಹೊರಡುವದು!

ಮ॥ ರಾ॥ ಶ್ರೀನಿವಾಸ ರವರವು.

ಸಾಹಿತ್ಯ ೧-೧೨-
ವಿಮರ್ಶೆ ೧-೧೦-
ಅರುಣ ೦-೮-
ವಿಸ್ಮಹ ೦-೫-
ಶಾಂತಾ ೦-೬-
ಸಾವಿತ್ರಿ ೧-೬-

ವ್ಯವಸ್ಥಾಪಕ— ' ಕನ್ನಡಿಗ ' ಬಾಗಲಕೋಟೆ,

ಲೋಕದಲ್ಲಿ ಅತ್ಯಂತ ಸುಖ

ವೆಂದರೆ ಸಂಪೂರ್ಣವಾದ ಆರೋಗ್ಯವನ್ನು ಹೊಂದುವದೇ ಸೈ. ಅನೇಕ ಹತ್ತು ವರ್ಷದ ಹುಡುಗರು ಸಹ ವಿವಿಧ ದುಷ್ಟಟಗಳ ಬಲಿ ಬಿದ್ದು, ತಮ್ಮ ಆರೋಗ್ಯವನ್ನು ಕಡಿಸಿಕೊಂಡು, ಹಾಸಿಗೆ ಹಿಡಿದು ಯಾತಕ್ಕೂ ಬಾರದವರಾಗುವರು.

ಅತಂಕ ನಿಗ್ರಹ ಮಾತ್ರೆಗಳು

ಕಾರುಣ್ಯದ ಸ್ವೈರವೃತ್ತಿಯ ಭೋಗದಿಂದಲೂ ಧಾತುವಿನ ಹ್ರಾಸದಿಂದಲೂ ಉಂಟಾದ ಎಲ್ಲ ಬಗೆಯ ಬೇನಗಳ ನಿವಾರಣೆಕ್ಕೆ ಈ ಮಾತ್ರೆಗಳು ರಾಮಬಾಣವಾಗಿವೆ. ದೇಹಕ್ಕೆ ಒಳ್ಳೇ ಬಲಕೊಟ್ಟು, ಧಾತುವನ್ನು ಶುದ್ಧಿಸೋಪಿಸುವವು. ೨೨ ಗುಳಿಗೆಗಳ ಟಿನ್ನಿಗೆ ಬೆಲೆ ಒಂದೇ ರೂಪಾಯಿ ಹೆಚ್ಚಿನ ಸಂಗತಿಗಳನ್ನು ಪುಸ್ತಕಿಯಾಗಿ ದೊರೆಯುವ ನಮ್ಮ ಕ್ಯಾಟಲಾಗಿನಲ್ಲಿ ನೋಡಿಕೊಳ್ಳಿ.

ಅತಂಕನಿಗ್ರಹ ಔಷಧಾಲಯ,
ನಂ. ೩೬, ಬ್ರಾಡ್ವೇ ಮದರಾಸು.

ದಿ. ಅಶೋಕ ಬಾಂಕ ಲಿಮಿಟೆಡ್ ಬಾಗಲಕೋಟೆ.

೧೯೧೩ ನೇ ಇಸ್ವಿಯ ಇಂಡಿಯನ್ ಕಂಪನೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಬಾಂಕಿನ ರೇವಿನ ದರವು ಕೆಳಗೆ ತೋರಿಸಿದ ಪ್ರಕಾರ ಇರುತ್ತದೆ.

ಚಾಲತೀ ರೇವಿಗೆ	ನೂರಕ್ಕೆ	ವರ್ಷಕ್ಕೆ	೨॥ ರೂ
ಸೇವ್ವಿಂಗ್ಸ ಬ್ಯಾಂಕ	”	”	೪ ರೂ.
ಮುದ್ದತೀ ರೇವಿಗೆ	”	”	೬॥ ರೂ.

ಇದಲ್ಲದೆ ೩-೬ ಮತ್ತು ೯ ತಿಂಗಳ ರೇವು ಇರುವದಾದಲ್ಲಿ ಸಮಕ್ಷಮಬಂದು ದರವನ್ನು ಗೊತ್ತುಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗೆ ಸಮ್ಮತವಾದ ಇಂದರೆ ಜೆಳ್ಳೆ. ಘಂಸ್ಟ ಕಾಳುಕಡಿ ಸರಕಾರೀ ಕಾಗದ ಮತ್ತು ವಿಮೆಯ ಪಾಲಿಸಿಗಳ ಮೇಲೆ ಸಹಾ ಸಾಲವು ದೊರೆಯುವದು.

ಇನ್ನೊಂದು ಹೆಚ್ಚಿನ ಸವಲತ್ತು! ವರ್ತಕರು ತಮ್ಮ ಮಾಲನ್ನು ವ್ಹಿ. ಪಿ. ದ್ವಾರಾ ಕಳಿಸುವಬದಲಾಗಿ ನಮ್ಮ ಬ್ಯಾಂಕಿನ ಮುಖಾಂತರ ಕಳಿಸಿಕೊಂಡರೆ ನೂರಕ್ಕೆ ೧೨ ಆಣೆಯಂತೆ ಉಳಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಿಕೊಳ್ಳಬೇಕು.

V R Torui
Managing Director

ಲಿವರಿನ ಕಿಶೆಯೊಳಗಿನ ಗಡಿಯಾರವು

FREE ಪುಕ್ಕಟೆ. FREE.

ಸ್ವಿಚ್ಚರಲಾಂಡದ ೧೯೫೯ ನೆಯ ಇಸ್ವಿಯ ಮಾದರಿಯು.



14 KT ಯ ಒಂಗಾರದ ತದಿಯುಳ್ಳ ಫೌಂಟನ್ ಪೆನ್ನವು, ಜಾರ್ಜ ಮಹಾರಾಜರಿಂದ ಒಳ್ಳೇ ಸರ್ಟಿಫಿಕೇಟು ಪಡೆದಂಥದು. ಫೌಂಟನ್ ಪೆನ್ನ ಕೊಳ್ಳುವವನಿಗೆ ಹೆಚ್ಚ ಗ್ರೇಡಿನ ಸಣ್ಣ ಆಕಾರದ ಚೆಳ್ಳಿಯ ಡಾಯಲ್ಲುಳ್ಳ ಒಂದು ಗಡಿಯಾರವು ಪುಕ್ಕಟೆ ದೊರೆಯುವದು. ಈ ಗಡಿಯಾರ ೫ ವರ್ಷದ ಗ್ಯಾರಂಟೀ ಈ ತಿಂಗಳ ಕನ್ನು ಹಾಗೂ ಗಡಿಯಾರ ಕೂಡಿಸಿ ಬೆಲೆ ರೂ. ೩—೧೫—೦ ಮಾತ್ರ.

೨ ಫೌಂಟನ್ ಪೆನ್ನ ಕೊಳ್ಳುವವರಿಗೆ ಒಂದು ಲಿವ್ಹರ ಕೈ ಗಡಿಯಾರವು ಪುಕ್ಕಟೆ ಕೊಡಲ್ಪಡುವದು. ಬೆಲೆ ೬—೧೫—೦ ಇದೇ ವೆಚ್ಚ ೦—೬—೦ ದೇರೆ.

IMPERIAL WATCH Co, (B)
Parel, Bombay. (12)

ವಾಸುದೇವ ಪುಸ್ತಕಾಲಯದಲ್ಲಿ.

೧	ಸುರತ ನಗರದ ಶ್ರೇಷ್ಠಿ ನಾಟಕ.	೧—೪—೦
೨	ಇಂದಿರೆ (ಸಚಿತ್ರ ಸಾ ಕಾದಂಬರಿ)	೨—೮—೦
೩	ನೀಳ್ಕತೆಗಳು ಭಾಗ ೧.	೧—೪—೦
೪	ಪತಿವಶೀಕರಣ ನಾಟಕ.	೦—೧೨-೦
೫	ಅಬ್ರಹಾಂಲಿಂಕನ್ ಚರಿತ್ರೆ.	೧—೮—೦
೬	ಮಾಧವಕರುಣಾ ವಿಲಾಸ.	೩—೧೨—೦
೭	ಲಕ್ಷ್ಮೀಬಾಯಿ ಝಾಂಸಿ ಚರಿತ್ರೆ	೨—೦—೦
೮	ಶೈವ ಸುಧಾರ್ಣವ (ಸಚಿತ್ರ)	೩—೮—೦

ಕಡಲಾಗಿಗೆ ಬರೆಯಿರಿ.

ಸ್ವಾಮಿ. ರಾ. ಕರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ.

ಅಹಮ್ಮದಾಬಾದದಲ್ಲಿ
ನಗರ ಸಭೆಯ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ.

ತಮ್ಮ ಆಡಳಿತೆಯೊಳಗಿನ ಎಲ್ಲ ಶಾಲೆಗಳು ಹಾಗೂ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸತಕ್ಕದ್ದೆಂದು ಅಹಮ್ಮದಾಬಾದ ನಗರ ಸಭೆಯವರು ನಿರ್ಧರಿಸಿಕೊಂಡಿದ್ದು, ತಾ॥ ೨೧ ನೆಯ ದಿವಸ ಅವುಗಳನ್ನು ನಿಲ್ಲಿಸತಕ್ಕವಂದ್ದಾರು ಈ ಬಗ್ಗೆ ವೆಚ್ಚಕ್ಕಾಗಿ ೩೦೦ ರೂ. ಗಳನ್ನು ತೆಗೆದಿಟ್ಟಿದ್ದಾರು ಬಾಗಲಕೋಟೆಯ ನಗರ ಸಭೆಯವರು?

ಈ ಪತ್ರಿಕೆಯು ಬಳವಂತ ಅಣ್ಣಾರಾವ ಮುಜುಮದಾರ ಇವರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ ಬಿ ೧೯೪೭. ವಾ. ಚಂ. ಅಂಚೇವೆಚ ಸೇರಿ ೪ ರೂ ೧೩ ಆಣೆಮಾತ
ಪ್ರತಿ ಬುಧವಾರ ಹಾಗೂ ರವಿವಾರ ಹೀಗೆ ವಾರದಲ್ಲಿ ಎರಡು ಸಲ ಪ್ರಕಟಿಸಲ್ಪಡುವದು

यद्यत् परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA BI-WEEKLY

ಸಂಪಾದಕರು:– ಬಳವಂತ ಅಣ್ಣಾರಾವ ಮುಜುಮದಾರ

ಪುಟ ೬ | ಬಾಗಲಕೋಟ ಸವಿವಾರ ಮತ್ತ್ರ ಣ ಶುದ್ಧ ೨ ಶಕ ೧೮೫೨ ತಾ. ೨೩-೭-೧೯೩೦ | Kannadiga Date 23—7—1930. | ಸಂಚಿಕೆ ೩೨

ಶವರಲೇಟ ಎಜನ್ಸಿ.

